**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**ಎಸ್.ಸಿ. ಸಂಃ 10038/2021**

**ಪಿರ್ಯಾದುದಾರರು** : ಸೊರಬ ಪೊಲೀಸ್ ಠಾಣೆ

ವಿರುದ್ಧ

**ಆರೋಪಿತರು** :

1) ಮಳ್ಳಿ ರಾಜಪ್ಪ ಬಿನ್ ಶೇಷಪ್ಪ,
ಸುಮಾರು 40 ವರ್ಷ,
ವಾಸಃ ಸಾರೆಕೊಪ್ಪ ಗ್ರಾಮ,
ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

2) ಮಳ್ಳಿ ಪರಸಪ್ಪ ಬಿನ್ ಭೈರಪ್ಪ,
ಸುಮಾರು 50 ವರ್ಷ,
ವಾಸಃ ಸಾರೆಕೊಪ್ಪ ಗ್ರಾಮ,
ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

3) ಮಳ್ಳಿ ರಮೇಶ ಬಿನ್ ಪರಸಪ್ಪ,
ಸುಮಾರು 43 ವರ್ಷ,
ವಾಸಃ ಸಾರೆಕೊಪ್ಪ ಗ್ರಾಮ,
ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

4) ಮಳ್ಳಿ ಲಿಂಗರಾಜ ಬಿನ್ ಬಂಗಾರಪ್ಪ,
ಸುಮಾರು 33 ವರ್ಷ,
ವಾಸಃ ಸಾರೆಕೊಪ್ಪ ಗ್ರಾಮ,
ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

5) ಮಳ್ಳಿ ಅಣ್ಣಪ್ಪ ಬಿನ್ ಬಂಗಾರಪ್ಪ,
ಸುಮಾರು 36 ವರ್ಷ,
ವಾಸಃ ಸಾರೆಕೊಪ್ಪ ಗ್ರಾಮ,
ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

6) ಮಳ್ಳಿ ಲೋಕೇಶ ಬಿನ್ ಬಂಗಾರಪ್ಪ,
ಸುಮಾರು 44 ವರ್ಷ,
ವಾಸಃ ಸಾರೆಕೊಪ್ಪ ಗ್ರಾಮ,
ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

7) ಮಳ್ಳಿ ಟಾಕಪ್ಪ ಬಿನ್ ಕಲ್ಲಪ್ಪ,
ಸುಮಾರು 45 ವರ್ಷ,
ವಾಸಃ ಸಾರೆಕೊಪ್ಪ ಗ್ರಾಮ,
ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

8) ಮಳ್ಳಿ ಕೃಷ್ಣಪ್ಪ ಬಿನ್ ಕಲ್ಲಪ್ಪ,
ಸುಮಾರು 50 ವರ್ಷ,
ವಾಸಃ ಸಾರೆಕೊಪ್ಪ ಗ್ರಾಮ,
ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

9) ಮಳ್ಳಿ ಲಕ್ಷ್ಮಣಪ್ಪ ಬಿನ್ ಭೈರಪ್ಪ,
ಸುಮಾರು 40 ವರ್ಷ,
ವಾಸಃ ಸಾರೆಕೊಪ್ಪ ಗ್ರಾಮ,
ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿತರ ಹೇಳಿಕೆ</u>**

ಪ್ರ.1 ಅಭಿಯೋಜನೆಯ ಪರ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿರುತ್ತೀರಾ?

ಉಃ

ಪ್ರಃ2 ಫ್ರಾ.ಸಾ.1 ಚೇತನ್ ರವರು ತಮ್ಮ ಸಾಕ್ಷ್ಯದಲ್ಲಿ – ನಾನು ಸೊರಬ ತಾಲ್ಲೂಕು, ಸಾರೇಕೊಪ್ಪ ಗ್ರಾಮದಲ್ಲಿ ವಾಸ ಇದ್ದು ವ್ಯವಸಾಯ ಕೆಲಸ ಮಾಡುತ್ತೇನೆ, ಮೊದಲು ಜೆ ಸಿ ಬಿ ಮತ್ತು ಟ್ರಾಕ್ಟರ್ ನ್ನು ಬಾಡಿಗೆಗೆ ಕೊಡುತ್ತಿದ್ದೆನು, ಸಾರೇಕೊಪ್ಪ ಗ್ರಾಮದ ಖಾನೆ ಷುಮಾರಿ ನಂಬರ್ ನಲ್ಲಿ ನಮ್ಮ ಮನೆಯ ಹತ್ತಿರ ಒಂದು ಎಕರೆ ಜಾಗದಲ್ಲಿ ಬಾಳೆ ಮತ್ತು ಅಡಿಕೆ ತೋಟವನ್ನು ಮಾಡಿರುತ್ತೇನೆ, ಸದರಿ ತೋಟಕ್ಕೆ ಮೊದಲು ಸಣ್ಣ ಬೇಲಿ ಇತ್ತು, ಸದರಿ ತೋಟಕ್ಕೆ ಹಳೆ ಬೇಲಿಯನ್ನು ತೆಗೆದು ತಂತಿ ಬೇಲಿಯನ್ನು ಹಾಕಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 3 ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ನಮ್ಮ ಜಮೀನಿನ ಪಕ್ಕದಲ್ಲಿ 1 ಮತ್ತು 2 ನೇ ಆರೋಪಿತರ ಮನೆ ಮತ್ತು ತೋಟ ಇರುತ್ತದೆ, ಆ ಸಮಯದಲ್ಲಿ 1 ಮತ್ತು 2 ನೇ ಆರೋಪಿತರಿಗೆ ಸೇರಿದ ದನ ಕರುಗಳು ಬಂದು ನಮ್ಮ ತೋಟವನ್ನು ಹಾಳು ಮಾಡಿದ್ದವು, ಈ ಬಗ್ಗೆ ನಾವು 1 ಮತ್ತು 2 ನೇ ಆರೋಪಿತರಿಗೆ ನಿಮ್ಮ ದನ ಕರುಗಳನ್ನು ಬಿಡಬೇಡಿ ನಮ್ಮ ತೋಟವನ್ನು ಹಾಳು ಮಾಡುತ್ತವೆ ಎಂದು ಹೇಳಿರುತ್ತೇವೆ, ಆ ಸಮಯದಲ್ಲಿ ಆರೋಪಿತರು ನಮ್ಮ ಜೊತೆಗೆ ಜಗಳಕ್ಕೆ ಬಂದು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ, ಆ ದಿನ ನಾವು ಏನೂ

ಹೇಳದೇ ವಾಪಾಸ್ ಹೋಗಿರುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ4 ಪ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ದಿನಾಂಕಃ09–06–2019 ರಂದು ನಾನು ಮತ್ತು ನನ್ನ ತಮ್ಮ ಚಾಸಾ–2 ಪಕ್ಕದ ಊರಿಗೆ ಜೆ ಸಿ ಬಿ ಮತ್ತು ಟ್ರಾಕ್ಟರ್ ಬಾಡಿಗೆಗೆ ಹೋಗಿದ್ದೆವು, ನಾವು ಹೊರಗೆ ಕೆಲಸಕ್ಕೆ ಹೋಗಿದ್ದಾಗ 1 ಮತ್ತು 2 ನೇ ಆರೋಪಿತರು ನಮ್ಮ ತೋಟಕ್ಕೆ ಮತ್ತು ತೋಟದ ಬೇಲಿಗೆ  ಬೆಂಕಿ ಹಾಕಿದ್ದರು, ಇದರಿಂದ ನಮ್ಮ ತೋಟದಲ್ಲಿರುವ ಸುಮಾರು 30–40 ಅಡಿಕೆ ಮತ್ತು ಬಾಳೆ ಗಿಡಗಳು ಸುಟ್ಟುಹೋಗಿದ್ದವು, ಆಗ ನಾನು ಮತ್ತು ಚಾಸಾ–2 ರವರು ಸೇರಿ 1 ಮತ್ತು 2 ನೇ ಆರೋಪಿತರನ್ನು ಸದರಿ ವಿಚಾರವನ್ನು ಕೇಳಲು ಅವರ ಮನೆಗೆ ಹೊರಟಾಗ ನಮ್ಮ ಗ್ರಾಮದ ಹುಣಸೆಕೊಪ್ಪದ ಮಂಜುನಾಥ ಇವರ ಮನೆಯ ಎದುರು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ ಮಳ್ಳಿ ರಾಜಪ್ಪ ಮತ್ತು ಅವರ ಕುಟುಂಬದವರು ಹಾಗೂ 2 ರಿಂದ 9 ನೇ ಆರೋಪಿತರಾದ  ಪರಸಪ್ಪ , ರಮೇಶ, ಲಕ್ಷ್ಮಣ, ನಿಂಗರಾಜ, ಟಾಕಪ್ಪ , ಅಣ್ಣಪ್ಪ , ಕೃಷ್ಣಪ್ಪ , ಲೋಕೇಶ ಒಟ್ಟು 9 ಜನ ಗಲಾಟೆ ಮಾಡುವ ಉದ್ದೇಶದಿಂದ ಕಾಡು ಕಲ್ಲುಗಳು , ದೊಣ್ಣೆಯಿಂದ ಹಲ್ಲೆ ಮಾಡುವ  ಉದ್ದೇಶದಿಂದ ರಸ್ತೆಯಲ್ಲಿ ಹೋಗುತ್ತಿದ್ದ ನಮ್ಮನ್ನು ತಡೆದು ಸೂಳೇಮಕ್ಕಳಾ, ಬೋಳಿ ಮಕ್ಕಳಾ ನಮ್ಮನ್ನು ಎದುರು ಹಾಕಿಕೊಂಡರೆ ನೀವು ಬದುಕಲು ಸಾಧ್ಯನ ಎಂದು ನಮಗೆ ಮತ್ತು ನಮ್ಮ ತಾಯಿಗೆ ಬೈದಿರುತ್ತಾರೆ, ನಮ್ಮ ಮಳ್ಳಿ ಮನೆತನದವರನ್ನು ಎದುರು ಹಾಕಿಕೊಂಡು ಊರಿನಲ್ಲಿ ನಿಮಗೆ ಬದುಕಲು ಬಿಡುವುದಿಲ್ಲ ಎಂದು ನಮ್ಮ ಮೇಲೆ ಹಲ್ಲೆ ಮಾಡಲು ಶುರು ಮಾಡಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ5 ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–3 ನೇ ಆರೋಪಿಯು ಕಾಡು ಜಾತಿಯ ಕಲ್ಲಿನಿಂದ ಚಾಸಾ–2 ರವರ ತಲೆಗೆ ಹೊಡೆದಿರುತ್ತಾನೆ, ಚಾಸಾ–2 ರವರಿಗೆ ತಲೆಗೆ ಗಾಯವಾಗಿ ಕೆಳಗೆ ಬಿದ್ದಿರುತ್ತಾನೆ, 4 ನೇ ಆರೋಪಿಯು ನನ್ನ ಎರಡೂ ಕೈಗಳನ್ನು ಹಿಡಿದುಕೊಂಡು 5 ನೇ ಆರೋಪಿ ನನ್ನ ಕುತ್ತಿಗೆ ಹಿಡಿದುಕೊಂಡಿದ್ದ, 6 ನೇ ಆರೋಪಿಯು ನನ್ನ ತಲೆಗೆ ರೀಪರ್ ನಿಂದ ಹಿಂದಿನಿಂದ ಹೊಡೆದಿರುತ್ತಾನೆ, ಆಗ ನನ್ನ ತಲೆಗೆ ಏಟಾಗಿ ಕೆಳಗೆ ಬಿದ್ದಿರುತ್ತೇನೆ. ನಂತರ 7 ನೇ ಆರೋಪಿಯು ಎರಡು ಮುಷ್ಟಿ ಗಾತ್ರದ ಕಲ್ಲಿನಿಂದ ನನ್ನ ತಲೆಯ ಬಲಭಾಗಕ್ಕೆ ಹೊಡೆದಿರುತ್ತಾನೆ, ಇದರಿಂದ ನನಗೆ ರಕ್ತಗಾಯಗಳಾಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 6 ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ನಂತರ ಉಳಿದ ಆರೋಪಿತರು ಎಲ್ಲರೂ ನಮ್ಮನ್ನು ಕಾಲಿನಿಂದ ಒದೆಯಲು ಮತ್ತು ತುಳಿಯುವುದಕ್ಕೆ ಶುರು ಮಾಡಿದರು, ನಂತರ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ, ಆ ಸಮಯದಲ್ಲಿ ಚಾಸಾ– 5 ಮತ್ತು ಚಾಸಾ–11 ರವರು ಬಂದು ಜಗಳ ಬಿಡಿಸಿರುತ್ತಾರೆ, ಆಗ ಆರೋಪಿತರು ಹೋಗುವಾಗ ನಮ್ಮನ್ನು ಎದುರು ಹಾಕಿಕೊಂಡು ನಮ್ಮ ಊರಿನಲ್ಲಿ ಹೇಗೆ ಬದುಕುತ್ತೀರಾ ನೋಡುತ್ತೇವೆ ಎಂದು ಜೀವ ಬೆದರಿಕೆ ಹಾಕಿ ಹೋಗಿರುತ್ತಾರೆ, ಹೋಗುವಾಗ ಅವರು ಕೃತ್ಯಕ್ಕೆ ಉಪಯೋಗಿಸಿದ ಕಲ್ಲು , ದೊಣ್ಣೆಗಳನ್ನು ಅಲ್ಲೆ ಬಿಸಾಕಿ ಹೋಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 7 ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ನಂತರ 108 ಅಂಬ್ಯುಲೆನ್ಸ್ ವಾಹನದಲ್ಲಿ ನಾನು ಮತ್ತು ನನ್ನ ತಮ್ಮ ಚಾಸಾ–2 ರವರು ಸೊರಬ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆಗೆ ದಾಖಲಾಗಿರುತ್ತೇವೆ, ನಂತರ ಶಿವಮೊಗ್ಗದ ಮ್ಯಾಕ್ಸ್ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿರುತ್ತಾರೆ, ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿದಾಗ ಸಾಯಂಕಾಲ 7–30 ಗಂಟೆ ಆಗಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ8 ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ನಾನು ಮತ್ತು ಚಾಸಾ–2 ರವರು ಶಿವಮೊಗ್ಗದ ಮ್ಯಾಕ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ದಿನಾಂಕಃ10–06–2019 ರಂದು ಸೊರಬ ಪೋಲೀಸರು ಸದರಿ ಆಸ್ಪತ್ರೆಗೆ ಬಂದು ನನ್ನ ಹೇಳಿಕೆ ದೂರನ್ನು ನಿಪಿ –1 ರಂತೆ ಪಡೆದುಕೊಂಡಿರುತ್ತಾರೆ, ನಿಪಿ –1 ಕ್ಕೆ ನಿಪಿ –1(ಎ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ9 ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ನಾನು ದೂರು ನೀಡಿದ 4 ದಿನದ ನಂತರ ಪೋಲೀಸರು ಸ್ಥಳದಲ್ಲಿ ಮಹಜರ್ ಮಾಡಲು ಬಂದಿದ್ದರು, ಆ ಸಮಯದಲ್ಲಿ ನಾನು, ಚಾಸಾ–3 ಮತ್ತು ಚಾಸಾ–4 ರವರು ಇದ್ದೆವು, ಗಲಾಟೆಯಾದ ಜಾಗವನ್ನು ಪೋಲೀಸರಿಗೆ ನಾನೇ ತೋರಿಸಿರುತ್ತೇನೆ, ಸ್ಥಳದಲ್ಲಿ 2 ಕಲ್ಲುಗಳು , ಒಂದು ರೀಪರ್ ತುಂಡು ಇದ್ದವು, ಆರೋಪಿತರು ನನಗೆ ರೀಪರ್ ನಿಂದ ಮತ್ತು 2 ಮುಷ್ಟಿ ಗಾತ್ರದ ಕಲ್ಲಿನಿಂದ ಹಲ್ಲೆ ಮಾಡಿರುತ್ತಾರೆ ಮತ್ತು ನನ್ನ ತಮ್ಮ ಚಾಸಾ–2 ರವರಿಗೆ ಕಲ್ಲಿನಿಂದ ಹಲ್ಲೆ ಮಾಡಿರುತ್ತಾರೆ ಎಂದು

ಪೋಲೀಸರಿಗೆ ತೋಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ10 ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ನಿಪಿ–2 ಸ್ಥಳ ಪಂಚನಾಮೆಯಾಗಿದ್ದು ನಿಪಿ 2 ಕ್ಕೆ ನಿಪಿ –2(ಎ) ರಂತೆ ಸಹಿ ಮಾಡಿರುತ್ತೇನೆ, ನಿಪಿ –2 ನ್ನು ಸಂಜೆ 4 ರಿಂದ 5–30 ಗಂಟೆ ವರೆಗೆ ಮಾಡಿರುತ್ತಾರೆ, ನಿಪಿ –2 ಕ್ಕೆ ನಾನಲ್ಲದೇ ಚಸಾ–3 ರಿಂದ ಚಸಾ–5 ರವರು ಸಹ ಸಹಿ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ11 ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ನಿಪಿ–2 ರ ಕಾಲಕ್ಕೆ ಪೋಲೀಸರು ಸ್ಥಳದಲ್ಲಿ ನಿಪಿ 3 –ಮತ್ತು ನಿಪಿ –4 ರಂತೆ ಎರಡು ಫೋಟೋ ತೆಗೆದಿರುತ್ತಾರೆ, ಆರೋಪಿತರು ಆ ದಿನ ಕೃತ್ಯಕ್ಕೆ ಉಪಯೋಗಿಸಿದ ಕಾಡು ಜಾತಿಯ 2 ಕಲ್ಲುಗಳು ಮತ್ತು ರೀಪರ್ ನ್ನು ನೋಡಿದರೆ ಗುರುತಿಸುತ್ತೇನೆ, ಪೋಲೀಸರು ನಿಪಿ –2 ರ ಸಮಯದಲ್ಲಿ ವಶಪಡಿಸಿಕೊಂಡ ಒಂದು ಕಾಡು ಜಾತಿಯ ಎರಡು ಹಿಡಿ ಗಾತ್ರದ ತ್ರಿಕೋನಾಕಾರದ ಕಾಡು ಜಾತಿಯ ಕಲ್ಲು ಮು ಮಾ –1, ಕಾಡು ಜಾತಿಯ ಮುಷ್ಟಿಗಾತ್ರದ ಕಲ್ಲು ಮು ಮಾ 2 ಮತ್ತು ರೀಪರ್ ನ್ನು ಮು ಮಾ –3 ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 12 ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ನಂತರ 25–06–2019 ರಂದು ಹೆಚ್ಚಿನ ಚಿಕಿತ್ಸೆಗಾಗಿ ಉಡುಪಿಯ ಅದರ್ಶ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಸದರಿ ಆಸ್ಪತ್ರೆಯಿಂದ ಮಂಗಳೂರಿನ ವೆನ್ ಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುತ್ತಾರೆ, ನಂತರ ಸದರಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಿಸಿಕೊಂಡು ಮನೆಗೆ ಕರೆದುಕೊಂಡು ಬಂದಿರುತ್ತೇವೆ, ಚಾಸಾ–2 ರವರು ಡಿಸ್ಚಾರ್ಜ್ ಮಾಡಿದಾಗ ಉಸಿರಾಡುತ್ತಿದ್ದ, ಮಾತನಾಡುವ ಸ್ಥಿತಿಯಲ್ಲಿರಲಿಲ್ಲ, 4 ದಿನಗಳ ನಂತರ ಚಾಸಾ–2 ರವರು ನಮ್ಮ ಮನೆಯಲ್ಲಿ ಕೋಮಾ ಸ್ಟೇಜ್ ಗೆ ಹೋಗಿರುತ್ತಾನೆ, ಆಗ ಶಿವಮೊಗ್ಗದ ಸಹ್ಯಾದ್ರಿ ನಾರಾಯಣ ಹೃದಯಾಲಯ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲು ಮಾಡಿರುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 13 ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ಪುನಃ 2 ದಿನಗಳ ನಂತರ ಉಡುಪಿಯ ಆದರ್ಶ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ, ಸದರಿ ಆಸ್ಪತ್ರೆಯಲ್ಲಿ ಚಾಸಾ–2 ರವರಿಗೆ ವೈಧ್ಯರು ಚಿಕಿತ್ಸೆ ನೀಡಿದ ನಂತರ ಚೇತರಿಸಿಕೊಂಡಿರುತ್ತಾನೆ, ಅದರೆ ಆತನು ಬಲಗೈ , ಬಲಗಾಲು ಸ್ವಾಧೀನ ಕಳೆದುಕೊಂಡಿರುತ್ತಾನೆ, ಮಾತು ನಿಂತು ಹೋಗಿರುತ್ತದೆ, ಆರೋಪಿತರು ನನ್ನನ್ನು ಮತ್ತು ಚಾಸಾ–2 ರವರನ್ನು ಕೊಲೆ ಮಾಡುವ ಉದ್ದೇಶದಿಂದ ನಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆ, ದಿನಾಂಕಃ28–06–2019 ರಂದು ಪೋಲೀಸರ ಮುಂದೆ ನನ್ನ ಮರು ಹೇಳಿಕೆಯನ್ನು ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ14 ಪ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ದಿನಾಂಕಃ10–08–2019 ರಂದು ಸೊರಬ ಪೊಲೀಸ್ ಠಾಣೆಯ ಸಿ ಪಿ ಐ ಉಮಾಪತಿ ರವರು, ಪಿ ಎಸ್ ಐ ಮತ್ತು ಪಿ.ಸಿ. ಗಳು ಸಾರೇಕೊಪ್ಪ ಗ್ರಾಮದಲ್ಲಿರುವ ನಮ್ಮ ಮನೆಗೆ ಚಾಸಾ–2 ರವರ ಹೇಳಿಕೆಯನ್ನು ಪಡೆದುಕೊಳ್ಳಲು ಬಂದಿದ್ದರು, ಆಗ ನನ್ನ ತಮ್ಮ ಹೇಳಿಕೆ ಕೊಡುವ ಸ್ಥಿತಿಯಲ್ಲಿ ಇರಲಿಲ್ಲ, ಪೋಲೀಸರು ನನ್ನ ತಮ್ಮ ಚಾಸಾ–2 ರವರು ಹೇಳಿಕೆ ಕೊಡುವ ಸ್ಥಿತಿಯಲ್ಲಿ ಇಲ್ಲದೇ ಇರುವ ಬಗ್ಗೆ ನಿಪಿ 5 ಮತ್ತು ನಿಪಿ 6 ರಂತೆ ಫೋಟೋಗಳನ್ನು ತೆಗೆದು ವೀಡೀಯೋ ರೆಕಾರ್ಡ್ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 15 ಪ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ನಂತರ ದಿನಾಂಕಃ 04–04–2020 ರಂದು ನಾನು ಸೊರಬ ಪೋಲೀಸ್ ಠಾಣೆಗೆ ಹೋಗಿ ನನ್ನ ಮರು ಹೇಳಿಕೆಯನ್ನು ನೀಡಿರುತ್ತೇನೆ, ಚಾಸಾ–2 ರವರು ಈಗಲೂ ಸಹ ಮಾತನಾಡುವ ಸ್ಥಿತಿಯಲ್ಲಿ ಇರುವುದಿಲ್ಲ ಮತ್ತು ಬಲಗೈ ಮತ್ತು ಬಲಗಾಲು ಸ್ವಾಧೀನ ಇರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ16 ಪ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಆರೋಪಿತರು ನೀವೇ ಆಗಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 17 ಪ್ರಾ.ಸಾ.2 ಪ್ರವೀಣ್ ತಂದೆ ಗೋಪಾಲಪ್ಪ ರವರು ತಮ್ಮ ಸಾಕ್ಷ್ಯದಲ್ಲಿ–ದಿನಾಂಕಃ09–06–2019 ರಂದು ಸಾಯಂಕಾಲ 7–30 ಗಂಟೆ ಸಮಯದಲ್ಲಿ ನಾನು ನಮ್ಮ ಊರು

ಸಾರೇಕೊಪ್ಪದಿಂದ ಸೊರಬ ತಾಲ್ಲೂಕು ಕೊರಕೋಡು ಗ್ರಾಮಕ್ಕೆ ನನ್ನ ಹೆಂಡತಿಯ ಊರಿಗೆ ಕಾರಿನಲ್ಲಿ ಹೋಗುತ್ತಿದ್ದೆ, ನಾನು ಹೋಗುತ್ತಿರುವಾಗ ಸಾರೇಕೊಪ್ಪದ ಹುಣಸೇಕೊಪ್ಪದ ಮಂಜುನಾಥರವರ ಮನೆಯ ಎದುರು ರಸ್ತೆಯಲ್ಲಿ ಜನ ಸೇರಿದ್ದರು, ಆ ಸಮಯದಲ್ಲಿ ಮಾತಿಗೆ ಮಾತು ಆಗಿ ಗಲಾಟೆ ಆಗುತ್ತಿತ್ತು, ಅಲ್ಲಿ ತುಂಬಾ ಜನ ಸೇರಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 18 ಫ್ರಾ.ಸಾ.2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಫ್ರಾ.ಸಾ–1 ಮತ್ತು ಚಾಸಾ–2 ರವರು ಅಲ್ಲೇ ಸ್ಥಳದಲ್ಲಿ ಇದ್ದು ಅವರನ್ನು ನಾನು ಮನೆಗೆ ಕಳಿಸಿರುತ್ತೇನೆ, ನಾನು ನೋಡಿದಾಗ ಫ್ರಾ.ಸಾ–1 ಮತ್ತು ಚಾಸಾ–2 ರವರು ರಸ್ತೆಯ ಮೇಲೆ ನಿಂತಿದ್ದರು, ಅವರನ್ನು ನಾನು ಮನೆಗೆ ಕರೆದುಕೊಂಡು ಹೋಗಿರುತ್ತೇನೆ, ಆ ಸಮಯದಲ್ಲಿ ನಾನಲ್ಲದೇ ಸ್ಥಳದಲ್ಲಿ ಚಾಸಾ –5 ಪ್ರಭಾಕರ ಇದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 19 ಫ್ರಾ.ಸಾ.2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ನಾನು ಜಗಳ ಬಿಡಿಸಿದಾಗ ಫ್ರಾ.ಸಾ–1 ಮತ್ತು ಚಾಸಾ–2 ರವರೊಂದಿಗೆ ಜಗಳ ಮಾಡಿದವರು ಕೆಟ್ಟದಾಗಿ ಬೈದುಕೊಳ್ಳುತ್ತಿದ್ದರು, ಅಲ್ಲಿ ಸೇರಿದ ಜನರ ಕೈಯ್ಯಲ್ಲಿ ಕಲ್ಲುಗಳು ಮತ್ತು ದೊಣ್ಣೆ ಇದ್ದವು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 20 ಪ್ರಾ.ಸಾ.2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಪ್ರಾ.ಸಾ–1 ಮತ್ತು ಚಾಸಾ–2 ರವರು ತಮಗೆ ಹೊಡೆತ ಬಿದ್ದಿದ್ದರಿಂದ ಸೊರಬ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ, ಚಾಸಾ–2 ರವರಿಗೆ ತಲೆಗೆ ಗಾಯ ಆಗಿತ್ತು, ಪ್ರಾಸಾ–1 ರವರಿಗೆ ತಲೆಗೆ ಪೆಟ್ಟಾಗಿತ್ತು, ಜಮೀನು ವಿಚಾರದಲ್ಲಿ ಗಲಾಟೆಯಾಗಿತ್ತು ಎಂದು ಗೊತ್ತಾಯಿತು, ಪ್ರಾ.ಸಾ–1 ರವರ ತೋಟಕ್ಕೆ ಬೆಂಕಿ ಹಾಕಿ ಸದರಿ ತೋಟ ಸುಟ್ಟಿದ್ದ ವಿಚಾರದಲ್ಲಿ ಗಲಾಟೆಯಾಗಿತ್ತು ಎಂದು ಗೊತ್ತಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 21 ಪ್ರಾ.ಸಾ.2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ದಿನಾಂಕಃ11–06–2019 ರಂದು ಘಟನಾ ಸ್ಥಳಕ್ಕೆ ಪೋಲೀಸರು ಬಂದಿದ್ದರು, ಪೋಲೀಸರಿಗೆ ಘಟನಾ ಸ್ಥಳವನ್ನು ಪ್ರಾ ಸಾ–1 ರವರು ತೋರಿಸಿರುತ್ತಾರೆ, ಆ ಸಮಯದಲ್ಲಿ ನಾನು, ಪ್ರಾ.ಸಾ–1 , ಚಾಸಾ–4 ರವರು ಇದ್ದೆವು, ಸ್ಥಳದಲ್ಲಿ 2 ಕಲ್ಲುಗಳು ಮತ್ತು ಒಂದು ದೊಣ್ಣೆ ಇದ್ದವು, ಪೋಲೀಸರು ಅವುಗಳನ್ನು ತಮ್ಮ ವಶಕ್ಕೆ ಪಡೆದಿರುತ್ತಾರೆ, ಪೋಲೀಸರು ಆ ಬಗ್ಗೆ ಪರಿಶೀಲನೆ ಮಾಡಿದರು, ಆ ಸಮಯದಲ್ಲಿ ಒಂದು ದಾಖಲೆಗೆ ನನ್ನ ಸಹಿಯನ್ನು ಪಡೆದು ಪೋಲೀಸರು ಸ್ಥಳದಲ್ಲಿ ನಿಪಿ 3 ಮತ್ತು ನಿಪಿ4 ರಂತೆ ಫೋಟೋವನ್ನು ತೆಗೆಸಿರುತ್ತಾರೆ, ನಿಪಿ 2 ಮಹಜರ್ ಗೆ ನಿಪಿ –2(ಬಿ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 22 ಫ್ರಾ.ಸಾ.2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಆ ದಿನ ಪೋಲೀಸರು ವಶಪಡಿಸಿಕೊಂಡಿದ್ದ 2 ಕಲ್ಲುಗಳು ಮತ್ತು ದೊಣ್ಣೆಯನ್ನು ಮು ಮಾ –1 ರಿಂದ ಮು ಮಾ 3 ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 23 ಫ್ರಾ.ಸಾ.2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಈ ಬಗ್ಗೆ ಪೋಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 24 ಫ್ರಾ.ಸಾ.2 ರವರು ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀ ಸವಾಲಿನಲ್ಲಿ – ಹುಣಸೇಕೊಪ್ಪದ ಮಂಜುನಾಥನ ಮನೆಯ ಹತ್ತಿರ ಹೋಗಿ ನೋಡಿದಾಗ ನಮ್ಮ ಗ್ರಾಮದ ಮಳ್ಳಿ ಕುಟುಂಬದವರಾದ ನ್ಯಾಯಾಲಯದ ಮುಂದಿರುವ 1 ರಿಂದ 9 ನೇ ಆರೋಪಿತರು ದೊಣ್ಣೆ ಮತ್ತು ಕಲ್ಲುಗಳನ್ನು ಹಿಡಿದುಕೊಂಡು , ಅಕ್ರಮ ಕೂಟ ಕಟ್ಟಿಕೊಂಡು ಫ್ರಾ.ಸಾ–1 ಮತ್ತು ಚಾಸಾ2 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಅವರನ್ನು ಅಡ್ಡಗಟ್ಟಿ ಅವರಿಗೆ ಏನ್ರೋ ಸೂಳೇ ಮಕ್ಕಳಾ ನಿಮ್ಮ ತಾಯಿನ ಹಡ ನಮ್ಮ ನಮನೆತನದವರನ್ನು ವಿರುದ್ದ ಹಾಕಿಕೊಂಡು ಊರಿನಲ್ಲಿ ಹೇಗೆ ಜೀನ ಮಾಡುತ್ತೀರಾ ಎಂದು ಅವಾಚ್ಯವಾಗಿ ಬೈಯ್ಯುತ್ತ ನಿಮ್ಮನ್ನು ನಾವು ನೋಡಿಕೊಳ್ಳುತ್ತೇವೆ ಅಂತ ಕೂಗುತ್ತಿದ್ದರು ಎಂದರೆ ಬೈದುಕೊಳ್ಳುತಿದ್ದರು, ಆಗ ನಾನು, ರೆಡ್ಡಿ ಪ್ರಭಾಕರ , ಮಹಾದೇವ , ಮತ್ತು ಚೇತನನ ಕುಟುಂಬದವರು ಸೇರಿ ಜಗಳ ಬಿಡಿಸಿದೆವು ಎಂದರೆ ಸರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 25 ಫ್ರಾ.ಸಾ.2 ರವರು ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀ ಸವಾಲಿನಲ್ಲಿ – ಶಿವಮೊಗ್ಗದ ಮ್ಯಾ ಕ್ಸ್‌ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಚೇತನ್ ಆರೋಪಿತರ ವಿರುದ್ಧ ದೂರನ್ನು ಕೊಟ್ಟಿದ್ದಾನೆ ಎಂದರೆ ಕೊಟ್ಟಿದ್ದು ನಿಜ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 26 ಫ್ರಾ.ಸಾ.3 ನಾಗರಾಜ ತಂದೆ ರಾಮಚಂದ್ರಪ್ಪ ರವರು ತಮ್ಮ ಸಾಕ್ಷ್ಯದಲ್ಲಿ– ದಿನಾಂಕಃ11–06–2019 ರಂದು ಸಂಜೆ 4–00 ಗಂಟೆ ಸಮಯದಲ್ಲಿ ಸಾರೇಕೊಪ್ಪದ ಮಂಜುನಾಥ ರವರ ಮನೆಯ ಹತ್ತಿರ ಟಾರ್ ರಸ್ತೆಯಲ್ಲಿ ಫ್ರಾ.ಸಾ–1 ಮತ್ತು 2 ರವರು ಹಾಜರಿದ್ದೆವು. ಫ್ರಾ.ಸಾ–1 ರವರು ತನ್ನ ಮತ್ತು ಚಾಸಾ–2 ರವರ ಮತ್ತು ಆರೋಪಿತರ ನಡುವೆ ಗಲಾಟೆಯಾಗಿದ್ದು ಎಂದು ಸ್ಥಳವನ್ನು ತೋರಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 27 ಫ್ರಾ.ಸಾ.3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಸ್ಥಳದಲ್ಲಿ ಕಲ್ಲುಗಳು ಮತ್ತು ದೊಣ್ಣೆಯನ್ನು ಪೋಲೀಸರಿಗೆ ತೋರಿಸಿದ್ದು ಆರೋಪಿತರು ಅವುಗಳಿಂದ ತಮಗೆ ಮತ್ತು ತನ್ನ ತಮ್ಮನಿಗೆ ಹಲ್ಲೆ ಮಾಡಿರುವುದಾಗಿ ತಿಳಿಸಿರುತ್ತಾರೆ, ಪೋಲೀಸರು ಸ್ಥಳದಲ್ಲಿ ಮಹಜರ್ ಮಾಡಿ ಅದಕ್ಕೆ ನನ್ನ ಸಹಿ ಪಡೆದಿರುತ್ತಾರೆ, ನಿಪಿ –2 ಮಹಜರ್ ಕಾಲಕ್ಕೆ ಪೋಲೀಸರು ನಿಪಿ 3 ಮತ್ತು ನಿಪಿ –4 ರಂತೆ ಫೋಟೋಗಳನ್ನು ತೆಗೆಸಿರುತ್ತಾರೆ, ನಿಪಿ –2 ಕ್ಕೆ ನಿಪಿ –2(ಸಿ) ರಂತೆ ಸಹಿ ಮಾಡಿರುತ್ತೇನೆ, ಆ ದಿನ ನನ್ನ ಜೊತೆಯಲ್ಲಿ ಫ್ರಾ.ಸಾ–1 ಮತ್ತು ಫ್ರಾಸಾ 2 ರವರು ಇದ್ದು

ಅವರು ಸಹ ಮಹಜರ್ ಗೆ ಸಹಿ ಮಾಡಿರುತ್ತಾರೆ, ಸ್ಥಳದಲ್ಲಿ ಅಮಾನತ್ತುಪಡಿಸಿಕೊಂಡಿದ್ದ 2 ಕಲ್ಲುಗಳು ಮತ್ತು ಒಂದು ರೀಪೀಸ್ ನ್ನು ಮು ಮಾ -1 ರಿಂದ ಮು ಮಾ 3 ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 28 ಫ್ರಾ.ಸಾ.4 ಪ್ರಭಾಕರ ತಂದೆ ಮಂಚಪ್ಪ ರವರು ತಮ್ಮ ಸಾಕ್ಷ್ಯದಲ್ಲಿ- ದಿನಾಂಕಃ 09-06-2019 ರಂದು ಸಂಜೆ 7-30 ಗಂಟೆ ಸಮಯದಲ್ಲಿ ಹುಣಸೆಕೊಪ್ಪದ ಮಂಜುನಾಥರವರ ಮನೆಯ ಎದುರು ರಸ್ತೆಯಲ್ಲಿ ಗಲಾಟೆಯಾಗುತ್ತಿತ್ತು, ಗಲಾಟೆ ಶಬ್ದ ಕೇಳಿ ನಾನು ಸ್ಥಳಕ್ಕೆ ಹೋಗಿರುತ್ತೇನೆ, ಆರೋಪಿತರು ಮತ್ತು ಫ್ರಾ.ಸಾ-1 ಮತ್ತು ಚಾಸಾ-2 ರವರು ಸ್ಥಳದಲ್ಲಿದ್ದು ಅವರ ನಡುವೆ ಘರ್ಷಣೆ ನಡೆಯುತ್ತಿತ್ತು, ಕಲ್ಲುಗಳು ಮತ್ತು ದೊಣ್ಣೆಗಳು ಸ್ಥಳದಲ್ಲಿ ಬಿದ್ದಿದ್ದವು. 3 ನೇ ಆರೋಪಿ ರಮೇಶ ಕಲ್ಲನ್ನು ತೆಗೆದುಕೊಂಡು ಬಂದಿದ್ದನು, 3 ನೇ ಆರೋಪಿ ರಮೇಶನು ಕಲ್ಲಿನಿಂದ ಚಾಸಾ-2 ರವರ ತಲೆಗೆ ಹೊಡೆದಿರುತ್ತಾನೆ ಆಗ ಚಾಸಾ-2 ಪ್ರಜ್ಞೆ ತಪ್ಪಿ ಬಿದ್ದಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 29 ಫ್ರಾ.ಸಾ.4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ- ಕಲ್ಲಿನಿಂದ ಹೊಡೆದಿದ್ದರಿಂದ ಚಾಸಾ-2 ರವರ ತಲೆಗೆ ಗಾಯ ಆಗಿತ್ತು, ಸ್ಥಳದಲ್ಲಿ ತುಂಬಾ ಜನ ಸೇರಿದ್ದರು, ಸ್ಥಳದಲ್ಲಿ ಚಾಸಾ-6, ಚಾಸಾ-8 , ಚಾಸಾ-9 ರವರು ಇದ್ದರು ಅವರನ್ನು ಬಿಟ್ಟು ಇನ್ನೂ ತುಂಬಾ ಜನ ಇದ್ದರು, ಆರೋಪಿಗಳು ಮತ್ತು ಫ್ರಾ.ಸಾ-1 ಮತ್ತು ಚಾಸಾ-2 ರವರ ನಡುವೆ ನಡೆಯುತ್ತಿದ್ದ ಗಲಾಟೆಯನ್ನು ಬಿಡಿಸಿರುತ್ತೇವೆ, ಆರೋಪಿತರು ಕಲ್ಲುಗಳು ಮತ್ತು ದೊಣ್ಣೆಯನ್ನು ರಸ್ತೆಯಲ್ಲಿ

ಬಿಸಾಕಿ ಹೋಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 30 ಫ್ರಾ.ಸಾ.4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ನಂತರ ಚಾಸಾ–2 ರವರನ್ನು ಫ್ರಾ.ಸಾ–1 , ಚಾಸಾ–6 ರವರು ಸೊರಬದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತಾರೆ, ಸೊರಬದ ಸರ್ಕಾರಿ ಆಸ್ಪತ್ರೆಯಿಂದ ಚಾಸಾ–2 ರವರನ್ನು ಶಿವಮೊಗ್ಗದ ಮ್ಯಾಕ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ, ಘಟನೆ ಬಗ್ಗೆ ಫ್ರಾ,ಸಾ–1 ರವರು ಪೋಲೀಸರಿಗೆ ದೂರನ್ನು ನೀಡಿರುತ್ತಾರೆ, ಫ್ರಾ.ಸಾ–1 ರವರ ತೋಟದಲ್ಲಿ 1 ನೇ ಆರೋಪಿ ಬೆಂಕಿ ಹಚ್ಚಿದ್ದರಿಂದ ಬಾಳೆ ಗಿಡಗಳು ಸುಟ್ಟು ಹೋಗಿದ್ದರ ಸಂಬಂಧ ಅವರ ನಡುವೆ ಗಲಾಟೆ ಆಗಿರುತ್ತದೆ , ಚಾಸಾ–2 ರವರು 2–3 ತಿಂಗಳುಗಳಿಂದ ಕೋಮಾ ಸ್ಥಿತಿಯಲ್ಲಿ ಇರುತ್ತಾನೆ, ಚಾಸಾ–2 ಈಗ ಮಾತನಾಡುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 31 ಫ್ರಾ.ಸಾ.4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಆರೋಪಿತರು ನೀವೇ ಆಗಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ32 ಫ್ರಾ.ಸಾ.4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದ 2 ಕಲ್ಲುಗಳು ಮತ್ತು ರೀಪೀಸ್ ನ್ನು ಮು ಮಾ 1 ರಿಂದ ಮು ಮಾ –3

ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 33 ಪ್ರಾ.ಸಾ.4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಘಟನೆಯ ಬಗ್ಗೆ ಪೋಲೀಸರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 34 ಪ್ರಾ.ಸಾ.5 ಪ್ರಮೋದಿನಿ ಕೋಂ ಸತೀಶ ರವರು ತಮ್ಮ ಸಾಕ್ಷ್ಯದಲ್ಲಿ– ನಾನು ಸಾರೇಕೊಪ್ಪ ಗ್ರಾಮದಲ್ಲಿ ವಾಸ ಇದ್ದೇನೆ, ಸಾರೇಕೊಪ್ಪ ಗ್ರಾಮದಲ್ಲಿ ಖಾನೆ ಷುಮಾರಿ ನಂಬರ್ ನಲ್ಲಿ 1 ಎಕರೆ ಜಾಗದಲ್ಲಿ ಬಾಳೆ ಮತ್ತು ಅಡಿಕೆ ಗಿಡಗಳನ್ನು ನೆಟ್ಟು ತೋಟ ಮಾಡಿರುತ್ತೇವೆ, ಸದರಿ ತೋಟಕ್ಕೆ ಮೊದಲು ಬೇಲಿ ಇರಲಿಲ್ಲ, ದನ ಕರುಗಳು ಬಂದು ತೋಟವನ್ನು ಹಾಳು ಮಾಡುತ್ತಿದ್ದವು, ಸದರಿ ತೋಟಕ್ಕೆ ತಂತಿ ಬೇಲಿ ಮಾಡಲು ರೆಡಿ ಮಾಡಿಕೊಂಡಿದ್ದೆವು, ನಮ್ಮ ತೋಟಕ್ಕೆ 1 ನೇ ಆರೋಪಿಯ ದನ ಕರುಗಳು ಬಂದು ತೋಟದಲ್ಲಿದ್ದ ಗಿಡಗಳನ್ನು ತಿಂದು ಹಾಳು ಮಾಡುತ್ತಿದ್ದವು, ಆ ಬಗ್ಗೆ ನಮ್ಮ ಮನೆಯವರು 1 ನೇ ಆರೋಪಿಗೆ ನಮ್ಮ ತೋಟಕ್ಕೆ ದನಗಳನ್ನು ಬಿಡಬೇಡಿ ಎಂದು ಹೇಳಿರುತ್ತಾರೆ, ಆದರೆ 1 ನೇ ಆರೋಪಿಯು ದನಗಳನ್ನು ನಮ್ಮ ತೋಟಕ್ಕೆ ಬಿಟ್ಟಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 35 ಫ್ರಾ.ಸಾ.5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ದಿನಾಂಕಃ09–06–2019 ರಂದು ಫ್ರಾ.ಸಾ–1 ಮತ್ತು ಚಾಸಾ2 ರವರು ಜೆ.ಸಿ.ಬಿ ತೆಗೆದುಕೊಂಡು ಕೆಲಸದ ನಿಮಿತ್ತ ಬೇರೆ ಊರಿಗೆ ಹೋಗಿದ್ದರು, ಆಗ 1 ನೇ ಆರೋಪಿ ಮತ್ತು ಪರಸಪ್ಪ ನಮ್ಮ ತೋಟಕ್ಕೆ ಬೆಂಕಿ ಹಾಕಿದ್ದರು, ಇದರಿಂದ ನಮ್ಮ ತೋಟದಲ್ಲಿದ್ದ 30–40 ಅಡಿಕೆ ಗಿಡಗಳು ಮತ್ತು ಬಾಳೆ ಗಿಡಗಳು ಸುಟ್ಟು ಹೋಗಿದ್ದವು. ನಂತರ ಫ್ರಾ.ಸಾ–1 ಮತ್ತು ಚಾಸಾ–2 ರವರು ಸಂಜೆ 7 ಗಂಟೆ ಸುಮಾರಿಗೆ ಮನೆಗೆ ಬಂದಿದ್ದು ಆಗ 1 ನೇ ಆರೋಪಿಯು ನಮ್ಮ ತೋಟಕ್ಕೆ ಬೆಂಕಿ ಹಚ್ಚಿದ ವಿಷಯ ಗೊತ್ತಾಗಿ 1 ಮತ್ತು 2 ನೇ ಆರೋಪಿಯನ್ನು ಕೇಳಲು ಹೋಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 36 ಫ್ರಾ.ಸಾ.5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಫ್ರಾ.ಸಾ–1 ಮತ್ತು ಚಾಸಾ–2 ರವರು ಹೋದ ಸ್ವಲ್ಪ ಹೊತ್ತಿನಲ್ಲಿ ಹುಣಸೇಕೊಪ್ಪದ ಮಂಜುನಾಥ ರವರ ಮನೆಯ ಕಡೆಯಿಂದ ಗಲಾಟೆ ಶಬ್ದ ಕೇಳಿರುತ್ತದೆ, ಆಗ ಸಾಯಂಕಾಲ 7–30 ಗಂಟೆ ಆಗಿರುತ್ತದೆ, ಗಲಾಟೆ ಶಬ್ದ ಕೇಳಿ ನಾನು , ಚಾಸಾ–7 ರಿಂದ ಚಾಸಾ–9 ರವರು ಹುಣಸೆಕೊಪ್ಪದ ಮಂಜುನಾಥರವರ ಮನೆಯ ಹತ್ತಿರ ಹೋಗಿರುತ್ತೇವೆ, ಆ ಸಮಯದಲ್ಲಿ ಆರೋಪಿತರು ಕಲ್ಲುಗಳು ಮತ್ತು ದೊಣ್ಣೆಯನ್ನು ತೆಗೆದುಕೊಂಡು ಫ್ರಾ.ಸಾ–1 ಮತ್ತು ಚಾಸಾ–2 ರವರ ಜೊತೆಗೆ ಜಗಳಕ್ಕೆ ಬಂದಿದ್ದರು, ಆರೋಪಿತರು ನಮ್ಮ ಕುಟುಂಬದವರ ತಂಟೆಗೆ ಬಂದರೆ ನಿಮ್ಮನ್ನು ಉಳಿಸುವುದಿಲ್ಲ ಎಂದು ಹೇಳಿ 3 ನೇ ಆರೋಪಿ ಕಲ್ಲಿನಿಂದ ಚಾಸಾ–2 ರವರ ತಲೆಗೆ ಹೊಡೆದನು, ಆಗ ಚಾಸಾ–2 ರವರು ಪ್ರಜ್ಞೆ ತಪ್ಪಿ ಕೆಳಗೆ ಬಿದ್ದಿರುತ್ತಾರೆ, ಉಳಿದ ಆರೋಪಿತರು ಚಾಸಾ–2 ರವರನ್ನು ಕಾಲಿನಿಂದ ಒದ್ದು ತುಳಿದಿರುತ್ತಾರೆ. ಆರೋಪಿತರು ರೀಪರ್ ನಿಂದ ಫ್ರಾ.ಸಾ–1 ರವರ ತಲೆಗೆ

ಹೊಡೆದಿರುತ್ತಾರೆ, 7 ನೇ ಆರೋಪಿ ಕಲ್ಲಿನಿಂದ ಫ್ರಾಸಾ-1 ರವರ ಹಣೆಗೆ ಹೊಡೆದಿರುತ್ತಾನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ37 ಫ್ರಾ.ಸಾ.5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ-ಆರೋಪಿತರು ಹಲ್ಲೆ ಮಾಡಿದ್ದರಿಂದ ಚಾಸಾ-2 ರವರ ತಲೆಗೆ ರಕ್ತ ಬಂದಿದ್ದು ತಲೆಗೆ ಮತ್ತು ಮೈಕೈಗೆ ಪೆಟ್ಟಾಗಿತ್ತು, ಫ್ರಾ.ಸಾ-1 ರವರಿಗೆ ತಲೆಯ ಹಿಂಭಾಗಕ್ಕೆ ಮತ್ತು ಹಣೆಗೆ ಪೆಟ್ಟಾಗಿತ್ತು, ನಂತರ ಫ್ರಾ.ಸಾ-4 , ಚಾಸಾ-10 , ಫ್ರಾ.ಸಾ-2 ರವರು ಬಂದು ಗಲಾಟೆ ಬಿಡಿಸಿರುತ್ತಾರೆ, ಆಗ ಆರೋಪಿತರು ನಮ್ಮ ತಂಟೆಗೆ ಬಂದರೆ ನಿಮ್ಮನ್ನು ಜೀವ ಸಹಿತ ಉಳಿಸುವುದಿಲ್ಲ ಎಂದು ಚಾಸಾ-2 ಮತ್ತು ಫ್ರಾ.ಸಾ-1 ರವರಿಗೆ ಬೆದರಿಕೆ ಹಾಕಿರುತ್ತಾರೆ, ದೊಣ್ಣೆ ಮತ್ತು ಕಲ್ಲುಗಳು ಅಲ್ಲೆ ರಸ್ತೆಯಲ್ಲಿ ಬಿದ್ದಿದ್ದವು, ನಂತರ ಆರೋಪಿತರು ತಮ್ಮ ಮನೆ ಕಡೆಗೆ ಹೋಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 38 ಫ್ರಾ.ಸಾ.5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ-ನಂತರ ಆ್ಯಂಬುಲೆನ್ಸ್ ನ್ನು ಕರೆಸಿ ಫ್ರಾ.ಸಾ-1 ಮತ್ತು ಚಾಸಾ-2 ರವರನ್ನು ಸೊರಬದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತೇವೆ, ಸೊರಬ ಆಸ್ಪತ್ರೆಯ ವೈಧ್ಯರು ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗಕ್ಕೆ ಕರೆದುಕೊಂಡು ಹೋಗಲು ಹೇಳಿದ್ದು ಫ್ರಾಸಾ-1 ಮತ್ತು ಚಾಸಾ-2 ಶಿವಮೊಗ್ಗದ ಮ್ಯಾಕ್ಸ್ ಅಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ದಾಖಲಿಸಿರುತ್ತೇವೆ, ನಂತರ ಉಡುಪಿಯ ಆದರ್ಶ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿ ದಾಖಲು ಮಾಡಿರುತ್ತೇವೆ, ನಂತರ ಮನೆಗೆ

ಕರೆದುಕೊಂಡು ಬಂದಿದ್ದು ಆ ನಂತರ ಮತ್ತೆ ಚಾಸಾ–2 ರವರು ಕೋಮಾ ಸ್ಥಿತಿಗೆ ಹೋಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 39 ಪ್ರಾ.ಸಾ.5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ನಂತರ ಮಂಗಳೂರಿನ ವೆನ್ ಲಾಕ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲು ಮಾಡಿರುತ್ತೇವೆ, ಆರೋಪಿತರು ನನ್ನ ಗಂಡ ಚಾಸಾ–2 ರವರಿಗೆ ಜೋರಾಗಿ ತಲೆಗೆ ಹೊಡೆದಿದ್ದರಿಂದ ಅವರಿಗೆ ಮಾತನಾಡಲು ಆಗುವುದಿಲ್ಲ ಮತ್ತು ಬಲಗೈ ಮತ್ತು ಬಲಗಾಲು ಸ್ವಾಧೀನ ಇರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 40 ಪ್ರಾ.ಸಾ.5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ಪ್ರಾ.ಸಾ–1 ರವರು ಈ ಬಗ್ಗೆ ಪೋಲೀಸರಿಗೆ ದೂರನ್ನು ನೀಡಿರುತ್ತಾರೆ, ಪೋಲೀಸರು ಗಲಾಟೆ ಬಗ್ಗೆ ನನ್ನನ್ನು ವಿಚಾರಣೆ ಮಾಡಿದ್ದಾರೆ , ಈ ಬಗ್ಗೆ ನಾನು ಹೇಳಿಕೆ ನೀಡಿರುತ್ತೇನೆ, ಆರೋಪಿತರು ಪ್ರಾ.ಸಾ–1 ಮತ್ತು ಚಾಸಾ–2 ರವರಿಗೆ ಹಲ್ಲೆ ಮಾಡಲು ಉಪಯೋಗಿಸಿದ್ದ 2 ಕಲ್ಲುಗಳು ಮತ್ತು ಒಂದು ರೀಪೀಸ್ ನ್ನು ಮು ಮಾ –1 ರಿಂದ ಮು ಮಾ –3 ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 41 ಪ್ರಾ.ಸಾ.5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಆರೋಪಿತರು ನೀವೇ ಆಗಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 42 ಪ್ರಾ.ಸಾ.6 ಚಂದ್ರಪ್ಪ ಬಿನ್ ಬಂಗಾರಪ್ಪ ರವರು ತಮ್ಮ ಸಾಕ್ಷ್ಯದಲ್ಲಿ– ದಿನಾಂಕಃ09-06-2019 ರಂದು ನಾನು ನನ್ನ ಮಗಳ ಊರಾದ ಸಾರೇಕೊಪ್ಪಕ್ಕೆ ಹೋಗಿದ್ದೆನು, ನನ್ನ ಅಳಿಯನ 1 ಎಕರೆ ಜಮೀನಿನಲ್ಲಿ ಅಡಿಕೆ ಮತ್ತು ಬಾಳೆ ಬೆಳೆಯನ್ನು ಬೆಳೆದಿದ್ದರು, ಸದರಿ ಜಮೀನು ಬಗರ್ ಹುಕುಂ ಜಮೀನು ಆಗಿರುತ್ತದೆ, ಸದರಿ ತೋಟಕ್ಕೆ ಮೊದಲು ಸಾದಾ ಬೇಲಿ ಇತ್ತು, ನಂತರ ಸದರಿ ಹಳೆ ಬೇಲಿಯನ್ನು ತೆಗೆದು ತಂತಿ ಬೇಲಿ ಹಾಕಲು ನಿರ್ಧರಿಸಿದ್ದರು, ನನ್ನ ಅಳಿಯನ ತೋಟದ ಪಕ್ಕದಲ್ಲಿ ಪರಸಪ್ಪ ರವರ ಜಮೀನು ಇರುತ್ತದೆ, ನನ್ನ ಅಳಿಯನ ತೋಟಕ್ಕೆ ಮೊದಲು ಸಾದಾ ಬೇಲಿ ಇದ್ದದ್ದರಿಂದ ಪರಸಪ್ಪರವರ ದನಗಳು ಬಂದು ಗಿಡಗಳನ್ನು ತಿಂದು ಹಾಳು ಮಾಡುತ್ತಿದ್ದವು, ಅವರ ದನಗಳು ಬಂದು ಹಾಳು ಮಾಡುತ್ತಿದ್ದುದರಿಂದ ನನ್ನ ಅಳಿಯಂದಿರು ಪರಸಪ್ಪರವರಿಗೆ ನಿಮ್ಮ ದನಗಳನ್ನು ಬಿಡಬೇಡಿ ಎಂದು ಹೇಳಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 43 ಪ್ರಾ.ಸಾ.6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ಆ ದಿನ ಪ್ರಾ ಸಾ –1 ಮತ್ತು ಚಾ ಸಾ –2 ರವರು ಹೊರಗಡೆ ಕೆಲಸಕ್ಕೆ ಹೋಗಿದ್ದರು, ಅವರು ಹೊರಗಡೆ ಕೆಲಸಕ್ಕೆ ಹೋದ ನಂತರ ಪರಸಪ್ಪನ ಕಡೆಯವರು ಬೇಲಿಯನ್ನು ಸುಟ್ಟು ಹಾಕಿರುತ್ತಾರೆ, ಅವರು ಸದರಿ ಬೇಲಿಗೆ ಬೆಂಕಿ ಹಾಕಿದ್ದರಿಂದ ಸುಮಾರು 100 ಅಡಿಕೆ ಮತ್ತು ಬಾಳೆ ಗಿಡಗಳು ಸುಟ್ಟು ಹೋಗಿರುತ್ತವೆ, ಪ್ರಾ ಸಾ –1 ಮತ್ತು ಚಾ ಸಾ –2 ರವರು ಕೆಲಸ ಮುಗಿಸಿಕೊಂಡು ಸಂಜೆ 7–30 ಗಂಟೆಗೆ ಮನೆಗೆ ಬಂದಿರುತ್ತಾರೆ, ನಂತರ ಪ್ರಾ ಸಾ –1 ಮತ್ತು ಚಾ ಸಾ –2 ರವರು ಮನೆಗೆ ಬಂದ ನಂತರ ಬಾಳೆ ಗಿಡಗಳು ಸುಟ್ಟು ಹೋದ ವಿಷಯ ಗೊತ್ತಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 44 ಪ್ರಾ.ಸಾ.6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ವಿಷಯ ಗೊತ್ತಾದ ನಂತರ ಪ್ರಾ ಸಾ –1 ಮತ್ತು ಚಾ ಸಾ –2 ರವರು ಸದರಿ ವಿಷಯವನ್ನು ಕೇಳಲು ಮಳ್ಳಿರಮೇಶಪ್ಪ ರವರ ಮನೆಗೆ ಕೇಳಲು ಹೋಗಿರುತ್ತಾರೆ, ಪ್ರಾ ಸಾ –1 ಮತ್ತು ಚಾ ಸಾ –2 ರವರು ಹೋದ ಸ್ವಲ್ಪ ಸಮಯದ ನಂತರ ನಮಗೆ ಗಲಾಟೆಯ ಶಬ್ದ ಕೇಳಿಸಿತು, ಸದರಿ ಗಲಾಟೆಯ ಶಬ್ದ ರಮೇಶಪ್ಪರವರ ಮನೆಗೆ ಹೋಗುವ ಹಾದಿಯಲ್ಲಿ ಕೇಳಿಸಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 45 ಪ್ರಾ.ಸಾ.6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಆಗ ನಾನು , ಚಾಸಾ–8 , ಚಾಸಾ–9 ಮತ್ತು ನನ್ನ ಮಗಳು ಪ್ರಾ ಸಾ –5 ರವರು ರಮೇಶಪ್ಪನ ಮನೆಯ ಎದುರು ರಸ್ತೆಯಲ್ಲಿ ಹೋಗಿ ನೋಡಿದಾಗ ಗಲಾಟೆಯಾಗುತ್ತಿದ್ದು ಸ್ಥಳದಲ್ಲಿ 1 ರಿಂದ 9 ನೇ ಆರೋಪಿತರು ಇದ್ದರು, ಸದರಿ 1 ರಿಂದ 9 ನೇ ಆರೋಪಿತರು ಗಲಾಟೆ ಮಾಡಲು ದೊಣ್ಣೆ ಮತ್ತು ಕಲ್ಲುಗಳನ್ನು ತೆಗೆದುಕೊಂಡು ಪ್ರಾ ಸಾ –1 ಮತ್ತು ಚಾಸಾ–2 ರವರನ್ನು ಹೊಡೆದು ಸಾಯಿಸುವ ಉದ್ದೇಶದಿಂದ ಬಂದಿದ್ದರು, 1 ರಿಂದ 9 ನೇ ಆರೋಪಿತರು ಪ್ರಾ ಸಾ –1 ಮತ್ತು ಚಾಸಾ–2 ರವರಿಗೆ ನಿಮ್ಮನ್ನು ಕೊಂದು ಹಾಕುತ್ತೇವೆ , ಕೊಲೆ ಮಾಡುತ್ತೇವೆ ಎಂದು ಹೇಳಿ ಹೊಡೆದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 46 ಪ್ರಾ.ಸಾ.6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–3 ನೇ ಆರೋಪಿ ಕಲ್ಲಿನಿಂದ ಚಾ ಸಾ–2 ರವರ ತಲೆಗೆ ಹೊಡೆದಿರುತ್ತಾನೆ, ಇದರಿಂದ ಚಾಸಾ –2 ರವರ ತಲೆಗೆ ಪೆಟ್ಟಾಗಿರುತ್ತದೆ,

ಆಗ ಚಾಸಾ–2 ಕುಸಿದು ಬಿದ್ದಿರುತ್ತಾನೆ, ಚಾಸಾ–2 ಬಿದ್ದ ನಂತರ ಉಳಿದ ಆರೋಪಿಗಳು ಸಹ ಆತನಿಗೆ ಹಲ್ಲೆ ಮಾಡಿರುತ್ತಾರೆ, ಫ್ರಾ ಸಾ –1 ರವರಿಗೂ ಸಹ ತಲೆಗೆ ಪೆಟ್ಟಾಗಿರುತ್ತದೆ, ಫ್ರಾ ಸಾ –1 ರವರಿಗೆ ಸಹ ಪರಸ್ಪ ಹಲ್ಲೆ ಮಾಡಿರುತ್ತಾರೆ, ನಾನು ಗಲಾಟೆಯನ್ನು ಬಿಡಿಸಲು ಹೋದ ಸಮಯದಲ್ಲಿ ಅರೋಪಿತರಲ್ಲದೇ ಇತರರು ಯಾರು ಇರಲಿಲ್ಲ, ನಾವು ಜಗಳ ಬಿಡಿಸಲು ಹೋದಾಗ ಆರೋಪಿತರು ನಿನ್ನನ್ನು ಸಹ ಕೊಲೆ ಮಾಡುತ್ತೇವೆ ಎಂದು ಹೇಳಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 47 ಫ್ರಾ.ಸಾ.6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ನಂತರ ಚಾಸಾ–2 ರವರನ್ನು ಅಂಬ್ಯುಲೆನ್ಸ್ ನಲ್ಲಿ ಸೊರಬದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ನಂತರ ಶಿವಮೊಗ್ಗದ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತಾರೆ, ನನ್ನ ಅಳಿಯ ಚಾಸಾ–2 ರವರಿಗೆ ಚಿಕಿತ್ಸೆ ಕೊಡಿಸಿದ್ದರೂ ಸಹ ಆತ 6 ತಿಂಗಳ ಕಾಲ ಕೋಮಾ ಸ್ಥಿತಿಯಲ್ಲಿ ಇದ್ದನು, ಈಗಲೂ ಸಹ ಆತನಿಗೆ ಮಾತನಾಡಲು ಬರುತ್ತಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 48 ಫ್ರಾ.ಸಾ.6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ಚಾಸಾ–2 ರವರಿಗೆ ಮತ್ತು ಫ್ರಾ ಸಾ –1 ರವರಿಗೆ ಆರೋಪಿತರು ಹೊಡೆಯಲು ಉಪಯೋಗಿಸಿದ ಕಲ್ಲುಗಳನ್ನು ಮತ್ತು ದೊಣ್ಣೆಯನ್ನು ಮು ಮಾ –1 ರಿಂದ ಮು ಮಾ –3 ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 49 ಫ್ರಾ.ಸಾ.6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಆರೋಪಿತರು ನೀವೇ ಆಗಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 50 ಫ್ರಾ.ಸಾ.6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಈ ಬಗ್ಗೆ ಪೋಲೀಸರ ಮುಂದೆ ನಾನು ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 51 ಫ್ರಾ.ಸಾ.6 ರವರು ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀಸವಾಲಿನಲ್ಲಿ – ಆ ದಿನ ಫ್ರಾ ಸಾ –1 ಮತ್ತು ಚಾಸಾ–2 ರವರಿಗೆ ವಿಷಯ ಗೊತ್ತಾದಾಗ ವಿಚಾರಿಸಲು 1 ನೇ ಆರೋಪಿಯ ಮನೆಗೆ ಹೋಗಿರುತ್ತಾರೆ ಎಂದರೆ ಹೌದು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 52 ಫ್ರಾ.ಸಾ.6 ರವರು ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀಸವಾಲಿನಲ್ಲಿ – ನಾವು ಗಲಾಟೆ ಕೇಳಿ ನೋಡಲು ಹೋದಾಗ ಹುಣಸೇಕೊಪ್ಪದ ಮಂಜುನಾಥರವರ ಮನೆಯ ಎದುರು ಗಲಾಟೆಯಾಗುತ್ತಿತ್ತು ಎಂದರೆ ಹೌದು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 53 ಫ್ರಾ.ಸಾ.6 ರವರು ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀಸವಾಲಿನಲ್ಲಿ – ಆರೋಪಿಗಳು ಫ್ರಾ ಸಾ –1 ಮತ್ತು ಚಾಸಾ–2 ರವರನ್ನು ರಸ್ತೆಯಲ್ಲಿ ಅಡ್ಡಗಟ್ಟಿ ಏನ್ರೋ ಸೂಳೆ

ಮಕ್ಕಳ ನಮ್ಮ ಮನೆತನದವರನ್ನು ಎದುರು ಹಾಕಿಕೊಂಡು ನಮ್ಮ ಊರಿನಲ್ಲಿ ಜೀವನ ಮಾಡುತ್ತೀರ ಎಂದು ಬೈದು ನಿಮ್ಮನ್ನು ನೋಡಿಕೊಳ್ಳುತ್ತೇವೆ ಎಂದು ಕೂಗಿಕೊಳ್ಳುತ್ತಿದ್ದರು ಎಂದರೆ ಹೌದು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 54 ಫ್ರಾ.ಸಾ.6 ರವರು ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀಸವಾಲಿನಲ್ಲಿ – ಚಾಸಾ–2 ರವರು ಕುಸಿದು ಬಿದ್ದಾಗ ಮಳ್ಳಿ ರಾಜಪ್ಪ , ಪರಸಪ್ಪ ರವರು ಸೇರಿ ಕೈಗಳಿಂದ ಚಾಸಾ–2 ರವರಿಗೆ ಹೊಡೆದು ಕಾಲಿನಿಂದ ಒದ್ದಿರುತ್ತಾರೆ ಎಂದರೆ ಹೌದು, 4 ನೇ ಆರೋಪಿಯು ಫ್ರಾ ಸಾ – 1 ರವರ ಎರಡೂ ಕೈಗಳನ್ನು ಹಿಡಿದುಕೊಂಡಿದ್ದ ಆಗ 6 ನೇ ಆರೋಪಿಯು ಫ್ರಾ ಸಾ –1 ರವರ ಹಿಂದೆಲೆಗೆ ಹೊಡೆದಿದ್ದ ಎಂದರೆ ಹೌದು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 55 ಫ್ರಾ.ಸಾ.6 ರವರು ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀಸವಾಲಿನಲ್ಲಿ – 7 ನೇ ಆರೋಪಿಯು ಫ್ರಾ ಸಾ –1 ರವರಿಗೆ ಕಲ್ಲಿನಿಂದ ಹೊಡೆದು ರಕ್ತಗಾಯಪಡಿಸಿದ್ದ ಎಂದರೆ ಹೌದು, ಆ ಸಮಯದಲ್ಲಿ ನಾವಲ್ಲದೇ ಸಾರೇಕೊಪ್ಪ ಗ್ರಾಮದ ರೆಡ್ಡಿ ಪ್ರಭಾಕರ , ಗಂಗೆ ಪ್ರವೀಣ , ಮಹಾದೇವ , ಫ್ರಾ ಸಾ –1 ರವರ ಮನೆಯವರು ಸೇರಿ ಜಗಳ ಬಿಡಿಸಿದರು ಎಂದರೆ ಹೌದು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 56 ಫ್ರಾ.ಸಾ.6 ರವರು ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀಸವಾಲಿನಲ್ಲಿ – ನಮ್ಮ ಊರು ತಾವರೆಹಳ್ಳಿ, ಆರೋಪಿತರು ಸಾರೇಕೊಪ್ಪದವರಾಗಿದ್ದು ನನಗೆ ಅವರ ಪರಿಚಯ

ಇದೆ, ನಾನು ಬೇರೆ ಊರಿನವನಾಗಿದ್ದರಿಂದ ಪ್ರಾ ಸಾ–1 ಮತ್ತು ಚಾಸಾ2 ರವರ ಮನೆಯ ಪಕ್ಕದಲ್ಲಿ 1 ನೇ ಆರೋಪಿಯ ದನಕರುಗಳು ಬಂದು ಚಾಸಾ–2 ರವರ ತೋಟವನ್ನು ಹಾಳು ಮಾಡಿದ್ದು ಅವರ ಹೆಸರು ಗೊತ್ತಿಲ್ಲದೇ ಇರುವ ಕಾರಣ ನಾನು ಪರಸಪ್ಪ ಎಂದು ಹೇಳಿರುತ್ತೇನೆ ಎಂದರೆ ಹೌದು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 57 ಪ್ರಾ.ಸಾ.7 ಗಣಪತಿ ಬಿನ್ ಸಣ್ಣಪ್ಪ ರವರು ತಮ್ಮ ಸಾಕ್ಷ್ಯದಲ್ಲಿ – ಆರೋಪಿತರು ಮತ್ತು ಪ್ರಾ ಸಾ –1 ಮತ್ತು ಚಾಸಾ –2 ರವರ ನಡುವೆ ಗಲಾಟೆಯಾಗಿರುತ್ತದೆ, ಸದರಿ ಗಲಾಟೆಯು 4 ವರ್ಷಗಳ ಹಿಂದೆ ನಡೆದಿರುತ್ತದೆ, ಸದರಿ ಗಲಾಟೆಯ ದಿನ 1 ನೇ ಆರೋಪಿಯು ನಮ್ಮ ತೋಟಕ್ಕೆ ಬೆಂಕಿ ಹಚ್ಚಿರುತ್ತಾರೆ, ನಾನು ಮತ್ತು ನಮ್ಮ ಮಕ್ಕಳು ಕೇಳಲು ಹೋಗಿದ್ದಕ್ಕೆ ಅವರು ನಮ್ಮ ಮೇಲೆ ಗಲಾಟೆಗೆ ಬಂದಿರುತ್ತಾರೆ, ಸದರಿ ತೋಟವು 1 ಎಕರೆ ವಿಸ್ತೀರ್ಣ ಇದ್ದು ಸದರಿ ತೋಟದಲ್ಲಿ ಅಡಿಕೆ ಮತ್ತು ಬಾಳೆ ಹಾಕಿದ್ದವು , ಬೆಂಕಿ ಹಚ್ಚಿದ್ದರಿಂದ ಸದರಿ ಮರಗಳು ಸುಟ್ಟು ಹೋಗಿರುತ್ತವೆ, ಸದರಿ ಘಟನೆಯಲ್ಲಿ 50 ಗಿಡಗಳು ಸುಟ್ಟು ಹೋಗಿರುತ್ತವೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 58 ಪ್ರಾ.ಸಾ.7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– 50 ಮರಗಳು ಸುಟ್ಟು ಹೋಗಿದ್ದರಿಂದ ಅಂದಾಜು 3 ರಿಂದ 4 ಸಾವಿರ ರೂ. ಲುಕ್ಸಾನು ಆಗಿರುತ್ತದೆ, ಸದರಿ ತೋಟಕ್ಕೆ ಬೇಲಿ ಇರಲಿಲ್ಲ, ತಂತಿ ಬೇಲಿ ಹಾಕಲು ತಂತಿಯನ್ನು ತಂದು ಜಮೀನಿನಲ್ಲಿ ಒಂದು ಕಡೆ ಇಟ್ಟಿರುತ್ತೇವೆ, ಸದರಿ ಬೇಲಿಯನ್ನು ಹಾಕಲು ಕಾರಣ ರಾಜಪ್ಪ ರವರ ಮನೆಯ ದನಗಳು

ತೋಟಕ್ಕೆ ಬರುತ್ತಿದ್ದು ಬೇಲಿ ಹಾಕಲು ತಂತಿಯನ್ನು ತರಿಸಿರುತ್ತೇವೆ, ದನಗಳು ಬಂದು ನಮ್ಮ ತೋಟವನ್ನು ಹಾಳು ಮಾಡುತ್ತಿದ್ದ ಬಗ್ಗೆ 1 ನೇ ಆರೋಪಿಗೆ ತಿಳಿಸಿರುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 59 ಫ್ರಾ.ಸಾ.7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–1 ನೇ ಆರೋಪಿ ನಮ್ಮ ತೋಟಕ್ಕೆ ಬೆಂಕಿ ಹಚ್ಚಿದ ದಿನ ಫ್ರಾ ಸಾ –1 ಮತ್ತು ಚಾ ಸಾ –2 ರವರು ಜೆ ಸಿ ಬಿ ತೆಗೆದುಕೊಂಡು ಬೇರೆ ಕಡೆಗೆ ಕೆಲಸಕ್ಕೆ ಹೋಗಿದ್ದರು, ಫ್ರಾ ಸಾ –1 ಮತ್ತು ಚಾ ಸಾ –2 ರವರು ಸಂಜೆ 6 –00 ಗಂಟೆಗೆ ಮನೆಗೆ ಬಂದಿರುತ್ತಾರೆ, ಫ್ರಾ ಸಾ –1 ಮತ್ತು ಚಾ ಸಾ –2 ರವರು ತೋಟಕ್ಕೆ ಬೆಂಕಿ ಹಾಕಿದ್ದನ್ನು ನೋಡಿ ತಿಳಿಸಿದುಕೊಂಡು 1 ನೇ ಆರೋಪಿಯ ಮನೆಗೆ ಕೇಳಲು ಸಂಜೆ 6–00 ರಿಂದ 6–30 ಗಂಟೆ ಸಮಯದಲ್ಲಿ ಹೋಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 60 ಫ್ರಾ.ಸಾ.7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಫ್ರಾ ಸಾ –1 ಮತ್ತು ಚಾ ಸಾ –2 ರವರು 1 ನೇ ಆರೋಪಿಯನ್ನು ತೋಟಕ್ಕೆ ಬೆಂಕಿ ಹಾಕಿದ ಬಗ್ಗೆ ಕೇಳಿ ಬರುವ ಸಮಯದಲ್ಲಿ ಆರೋಪಿತರು ಗಲಾಟೆ ಮಾಡಿರುತ್ತಾರೆ, ಹುಣಸೆಕೊಪ್ಪದ ಮಂಜಪ್ಪನ ಮನೆಯ ಹತ್ತಿರ ಗಲಾಟೆ ಮಾಡಿರುತ್ತಾರೆ, ಗಲಾಟೆಯ ಶಬ್ದ ನಮ್ಮ ಮನೆಗೆ ಕೇಳಿಸಿರುತ್ತದೆ, ಗಲಾಟೆಯ ಶಬ್ದ ಕೇಳಿ ನಾನು, ಚಾಸಾ–9 ನನ್ನ ಹೆಂಡತಿ , ಫ್ರಾ ಸಾ –5 ನನ್ನ ಸೊಸೆ ಮತ್ತು ಫ್ರಾ ಸಾ –6 ಸ್ಥಳಕ್ಕೆ ಹೋಗಿರುತ್ತೇವೆ , ನಾವು ಹೋಗುವಷ್ಟರಲ್ಲಿ ಗಲಾಟೆ ಮುಗಿದಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 61 ಪ್ರಾ.ಸಾ.7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– 3 ನೇ ಆರೋಪಿಯು ಕಲ್ಲಿನಿಂದ ಚಾಸಾ–2 ರವರ ತಲೆಗೆ ಹೊಡೆದಿರುತ್ತಾನೆ, ಆಗ ಚಾಸಾ–2 ಕೆಳಗೆ ಬಿದ್ದಿರುತ್ತಾನೆ, ಆಗ ಚಾಸಾ–2 ಕೆಳಗೆ ಬಿದ್ದಾಗ 7 ಮತ್ತು 8 ನೇ ಆರೋಪಿತರು ಚಾಸಾ–2 ರವರಿಗೆ ಒದೆಯುತ್ತಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 62 ಪ್ರಾ.ಸಾ.7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ಪ್ರಾ ಸಾ –1 ರವರಿಗೆ 4 ನೇ ಆರೋಪಿ ಕೈ ರಟ್ಟೆ ಹಿಡಿದುಕೊಂಡಿದ್ದು 5 ನೇ ಆರೋಪಿ ಪ್ರಾ ಸಾ –1 ರವರ ಕುತ್ತಿಗೆ ಹಿಡಿದುಕೊಂಡಿದ್ದು 6 ನೇ ಆರೋಪಿ ದೊಣ್ಣೆಯಿಂದ ಪ್ರಾ ಸಾ –1 ರವರ ತಲೆಯ ಬಲಭಾಗಕ್ಕೆ ಹೊಡೆದನು, ಆಗ ಪ್ರಾ ಸಾ –1 ಪ್ರಜ್ಞೆ ತಪ್ಪಿ ಕೆಳಗೆ ಬಿದ್ದಿರುತ್ತಾನೆ, ನಂತರ ಪ್ರಾ ಸಾ –2 ಮತ್ತು ಪ್ರಾ ಸಾ –4 ರವರು ಗಲಾಟೆಯನ್ನು ಬಿಡಿಸಿರುತ್ತಾರೆ, ಗಲಾಟೆ ಬಿಡಿಸಿದ ನಂತರ ಆರೋಪಿತರು ಅಲ್ಲಿಂದ ಹೊರಟು ಹೋಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 63 ಪ್ರಾ.ಸಾ.7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ನಂತರ ಪ್ರಾ ಸಾ –1 ಮತ್ತು ಚಾಸಾ–2 ರವರನ್ನು ಸೊರಬ ಆಸ್ಪತ್ರಗೆ ಕರೆದುಕೊಂಡು ಹೋಗಿದ್ದು ಸದರಿ ಆಸ್ಪತ್ರೆಯಲ್ಲಿ ವೈದ್ಯರು ಶಿವಮೊಗ್ಗದ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಹೇಳಿದ್ದರಿಂದ ಶಿವಮೊಗ್ಗದ ಮ್ಯಾಕ್ಸ್ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿರುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ64 ಫ್ರಾ.ಸಾ.7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಮ್ಯಾಕ್ಸ್ ಆಸ್ಪತ್ರೆಯಲ್ಲಿ ಚಾಸಾ–2 ರವರು ಕೋಮಾದಲ್ಲಿ ಇದ್ದರು, ಚಾಸಾ–2 ರವರನ್ನು ಮ್ಯಾಕ್ಸ್ ಆಸ್ಪತ್ರೆಯಿಂದ ಉಡುಪಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ, ಈಗ ಚಾಸಾ–2 ರವರು ಮಾತನಾಡುವ ಸ್ಥಿತಿಯಲ್ಲಿ ಇಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ65 ಫ್ರಾ.ಸಾ.7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಆರೋಪಿತರ ವಿರುದ್ಧ ದೂರನ್ನು ಫ್ರಾ ಸಾ –1 ರವರು ನೀಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 66 ಫ್ರಾ.ಸಾ.7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– 3 ನೇ ಆರೋಪಿ ಚಾಸಾ–2 ರವರಿಗೆ ಹೊಡೆಯಲು ಉಪಯೋಗಿಸಿದ ಕಲ್ಲನ್ನು ಮು ಮಾ – 2 ಎಂದು , ಫ್ರಾ ಸಾ –1 ರವರಿಗೆ ಹೊಡೆಯಲು ಉಪಯೋಗಿಸಿದ ರೀಪರ್ ನ್ನು ಮು ಮಾ – 3 ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ67 ಫ್ರಾ.ಸಾ.7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಆರೋಪಿತರು ನೀವೇ ಆಗಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 68 ಪ್ರಾ.ಸಾ.7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಈ ಬಗ್ಗೆ ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 69 ಪ್ರಾ.ಸಾ.7 ರವರು ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀಸವಾಲಿನಲ್ಲಿ – ಗಲಾಟೆಯಾದ ಸಮಯದಲ್ಲಿ ನಾವೆಲ್ಲರೂ ಸ್ಥಳಕ್ಕೆ ಹೋದಾಗ ಆರೋಪಿತರು ಕೈಯ್ಯಲ್ಲಿ ದೊಣ್ಣೆ ಮತ್ತು ಕಲ್ಲನ್ನು ಹಿಡಿದುಕೊಂಡು ಪ್ರಾ ಸಾ –1 ಮತ್ತು ಚಾಸಾ–2 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಅಡ್ಡಗಟ್ಟಿ ಏನ್ರೋ ಸೂಳೇ ಮಕ್ಕಳಾ ನಮ್ಮ ಮನೆತನದವರನ್ನು ಎದುರು ಹಾಕಿಕೊಂಡು ನಮ್ಮ ಊರಿನಲ್ಲಿ ಹೇಗೆ ಜೀವನ ಮಾಡುತ್ತೀರಾ ನೋಡುತ್ತೇವೆ ಎಂದು ಬೆದರಿಕೆ ಹಾಕುತ್ತಿದ್ದರು ಎಂದರೆ ಹೌದು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 70 ಪ್ರಾ.ಸಾ.7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಪ್ರಾ ಸಾ –1 ರವರ ಹಣೆಗೆ 7 ನೇ ಆರೋಪಿ ಕಲ್ಲಿನಿಂದ ಹೊಡೆದು ರಕ್ತಗಾಯಪಡಿಸಿದ್ದ ಎಂದರೆ ಹೌದು ಎಂದು, ಸದರಿ ಕಲ್ಲನ್ನು ಮು ಮಾ –1 ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 71 ಪ್ರಾ.ಸಾ.7 ರವರು ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀಸವಾಲಿನಲ್ಲಿ – ಆರೋಪಿಗಳು ಪ್ರಾ ಸಾ –1 ಮತ್ತು ಚಾಸಾ–2 ರವರಿಗೆ ಈ ದಿನ ಉಳಿದುಕೊಂಡಿದ್ದೀರಿ ಇನ್ನು

ಮುಂದೆ ನಮ್ಮ ತಂಟೆಗೆ ಬಂದರೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದರು ಎಂದರೆ ಹೌದು, ಈ ವಿಷಯಗಳನ್ನು ಪೋಲೀಸರ ಮುಂದೆ ಹೇಳಿರುತ್ತೇನೆ ಎಂದರೆ ಹೌದು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 72 ಫ್ರಾ.ಸಾ.8 ಮಹಾದೇವ ರವರು ತಮ್ಮ ಸಾಕ್ಷ್ಯದಲ್ಲಿ – 4 ವರ್ಷಗಳ ಹಿಂದೆ ಸಂಜೆ 6 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ಗಲಾಟೆಯ ಶಬ್ದ ಹುಣಸೇಕೊಪ್ಪದ ಮಂಜಪ್ಪನ ಮನೆಯ ಬಳಿ ಕೇಳಿಸುತ್ತಿತ್ತು, ಆಗ ನಾನು ಹುಣಸೇಕೊಪ್ಪದ ಮಂಜಪ್ಪನ ಮನೆಯ ಹತ್ತಿರ ಹೋಗಿರುತ್ತೇನೆ, ಆಗ ಗಲಾಟೆ ಮುಗಿದಿತ್ತು, ಫ್ರಾ ಸಾ –1 ಮತ್ತು ಚಾಸಾ–2 ಮತ್ತು ಆರೋಪಿತರ ನಡುವೆ ಫ್ರಾಸಾ –1 ರವರ ತೋಟಕ್ಕೆ ದನಗಳು ನುಗ್ಗಿದ ಬಗ್ಗೆ ಗಲಾಟೆಯಾಗಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 73 ಫ್ರಾ.ಸಾ.8 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಗಲಾಟೆಯಲ್ಲಿ ಫ್ರಾ ಸಾ –1 ಮತ್ತು ಚಾಸಾ–2 ರವರಿಗೆ ಪೆಟ್ಟಾಗಿರುತ್ತದೆ, ಮು ಮಾ –2 ಕಲ್ಲು ಲೈಟ್ ಕಂಬದ ಬಳಿ ಬಿದ್ದಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 74 ಫ್ರಾ.ಸಾ.8 ರವರು ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀಸವಾಲಿನಲ್ಲಿ – ದಿನಾಂಕಃ09–06–2019 ರಂದು ರಾತ್ರಿ 7–30 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ಸಾರೆಕೊಪ್ಪದ ಹುಣಸೆಕೊಪ್ಪ ಮಂಜುನಾಥ ರವರ ಮನೆ ಎದುರು ರಸ್ತೆಯಲ್ಲಿ

ಜಗಳ ಆಡುತ್ತಿರುವುದು ಕಂಡು ಬಂತು ಎಂದರೆ ಹೌದು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 75 ಫ್ರಾ.ಸಾ.8 ರವರು ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀಸವಾಲಿನಲ್ಲಿ – ಕೂಡಲೇ ನಾನು ಈ ದಿನ ಬೆಳಿಗ್ಗೆ ಚೇತನ್ ಇವರ ತೋಟದ ಪಕ್ಕದ ಜಮೀನುದಾರರಾದ ಮಳ್ಳಿ ರಾಮಪ್ಪ ಇವರ ದನಗಳು ತೋಟಕ್ಕೆ ಬಂದು ಹಾಳು ಮಾಡಿದ್ದರಿಂದ ಅವರನ್ನು ಕರೆದು ತೋಟಕ್ಕೆ ದನಗಳನ್ನು ಬಿಡಬೇಡಿ ಎಂದು ಚೇತನ ಹೇಳಿದ್ದರು, ಮಳ್ಳಿ ರಾಜಪ್ಪರವರು ಚೇತನರವರ ಜಮೀನು ಬಳಿ ಬೆಂಕಿಯನ್ನು ಹಾಕಿದ್ದರು ಎಂದರೆ ಹೌದು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 76 ಫ್ರಾ.ಸಾ.8 ರವರು ಸರ್ಕಾರಿ ಅಭಿಯೋಜಕರು ಮಾಡಿದ ಪಾಟೀಸವಾಲಿನಲ್ಲಿ – 2 ನೇ ಆರೋಪಿ ಮಳ್ಳಿ ರಾಜಪ್ಪ ಚಾಸಾ–2 ಮತ್ತುಫ್ರಾ ಸಾ 1 ರವರ ತೋಟಕ್ಕೆ ಬೆಂಕಿ ಹಾಕಿದ್ದರಿಂದ ಅವರ 30–40 ಅಡಿಕೆ ಗಿಡಗಳು ಸುಟ್ಟು ಹೋಗಿರುತ್ತವೆ ಎಂದರೆ 4–5 ಗಿಡಗಳು ಸುಟ್ಟು ಹೋಗಿರುತ್ತವೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 77 ಫ್ರಾ.ಸಾ.9 ಡಾಃ ನಾರಾಯಣ ಪಂಜಿ, ನರ ರೋಗ ತಜ್ಞರು , ತಮ್ಮ ಸಾಕ್ಷ್ಯದಲ್ಲಿ – ದಿನಾಂಕಃ 10–16–2019 ರಂದು ಫ್ರಾ ಸಾ –1 ರವರು ಬೆಳಿಗ್ಗೆ 10 ಗಂಟೆ ಸುಮಾರಿಗೆ ದಾಖಲಾಗಿದ್ದು ಮ್ಯಾಕ್ಸ್ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗದಲ್ಲಿ ರಾತ್ರಿ 2–47 ಗಂಟೆ ಸಮಯಕ್ಕೆ

ತಪಾಸಣೆ ಮಾಡಲಾಗಿ ಫ್ರಾ ಸಾ –1 ರವರಿಗೆ ಪ್ರಜ್ಞೆ ಇದ್ದು, ತಲೆ ಬುರುಡೆಯ ಎಡಭಾಗದಲ್ಲಿ ಹಾಗೂ ಹಣೆಯ ಮೇಲೆ ತರಚಿದ ಗಾಯಗಳು ಇದ್ದು ಸ್ಕ್ಯಾನಿಂಗ್ ಮಾಡಲಾಗಿ ಅದರಲ್ಲಿ ಯಾವುದೇ ತರಹದ ಒಳಭಾಗದಲ್ಲಿ ಗಾಯಗಳು ಇಲ್ಲದ್ದು ಕಂಡುಬಂದಿದ್ದು ಸದರಿ ವ್ಯಕ್ತಿಗೆ ಆದಂತಹ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು ಈ ಬಗ್ಗೆ ನಾನು ಗಾಯದ ಪ್ರಮಾಣಪತ್ರ ವನ್ನು ನಿಪಿ 9 ರಂತೆ ನೀಡಿರುತ್ತೇನೆ, ನಿಪಿ 9 ಕ್ಕೆ ನಿಪಿ –9(ಎ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 78 ಫ್ರಾ.ಸಾ. 9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–. ಫ್ರಾ ಸಾ1 ರವರು ಹಲ್ಲೆಯ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಯಲ್ಲಿ ದಾಖಲಾಗಿದ್ದರು, ಮು ಮಾ –3 ರಿಂದ ಹಲ್ಲೆ ಮಾಡಿದಾಗ ನಿಪಿ 9 ರಲ್ಲಿ ಹೇಳಿದಂತಹ ಗಾಯಗಳು ಆಗುವ ಸಾಧ್ಯತೆ ಇದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 79 ಫ್ರಾ.ಸಾ. 9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಫ್ರಾ ಸಾ –1 ರವರಿಗೆ ಸಂಬಂಧಪಟ್ಟ ಕ್ಯಾಸುಯಾಲಿಟಿ ಪೇಪರ್ ಗಳನ್ನು ನಿಪಿ 10 ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 80 ಫ್ರಾ.ಸಾ. 9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ನಿಪಿ –10 ರಲ್ಲಿ ಕಾಣಿಸಿದಂತಹ ನೋವು ಮು ಮಾ –3 ರಿಂದ ಹಲ್ಲೆ ಮಾಡಿದಾಗ ಆಗುವಂತಹ ಸಾಧ್ಯತೆ ಇದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 81 ಫ್ರಾ.ಸಾ. 10 ಡಾಃ ಎ. ರಾಜಾ, Senior Consultant Neuro Surgeon ರವರು ತಮ್ಮ ಸಾಕ್ಷ್ಯದಲ್ಲಿ– ಚಾಸಾ2 ಸತೀಶ ರವರು ನಮ್ಮ ಅಸ್ಪತ್ರೆಯಲ್ಲಿ ಒಳರೋಗಿಯಾಗಿ ಹಾಸ್ಪಿಟಲ್ ನಂಃ 171288 ರಲ್ಲಿ ದಿನಾಂಕಃ 27–07–2019 ರಿಂದ 26–10–2019 ರವರೆಗೆ ಚಿಕಿತ್ಸೆ ಪಡೆದಿರುತ್ತಾರೆ, ಸದರಿ ಚಾಸಾ–2 ರವರು ಮೊದಲೇ ಆಪರೇಷನ್ ಆಗಿ ನಮ್ಮ ಆಸ್ಪತ್ರೆಗೆ ಬಂದಾಗ ಅವರಿಗೆ ತಲೆಗೆ ಮೆದುಳಿಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು ಬೇರೆ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಪಡೆದು ಬಂದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 82 ಫ್ರಾ.ಸಾ. 10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಅದೇ ರೀತಿ ಚಾಸಾ–2 ರವರು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಅವರ ದೇಹದ ಬಲಭಾಗದಲ್ಲಿ ವೀಕ್‌ನೆಸ್ ಇತ್ತು, ಚಾಸಾ2 ರವರು ತನ್ನ ದಿನನಿತ್ಯದ ಕಾರ್ಯಗಳಿಗೆ ತಾನು ಸ್ವಂತವಾಗಿ ಮಾಡಿಕೊಳ್ಳಲು ಸಾಧ್ಯವಿರಲಿಲ್ಲ, ಇತರರನ್ನು ಅವಲಂಬಿಸಿದ್ದರು, ಒಂದು ವರ್ಷ ಆದ ನಂತರ ಚಾಸಾ–2 ರವರನ್ನು ನಾನು ಪರೀಕ್ಷೆ ಮಾಡಿದಾಗ ಆತನಿಗೆ ನ್ಯೂರೋ ಸಮಸ್ಯೆ ತುಂಬಾ ಇದ್ದದ್ದರಿಂದ ಆತನಿಗೆ ವಾಸಿಯಾಗುವ ಅವಕಾಶ ಕಡಿಮೆ ಇರುತ್ತದೆ, ಈ ಬಗ್ಗೆ ನಾನು ಚಾಸಾ–2 ರವರಿಗೆ ನಿಪಿ –11

ರಂತೆ ಪ್ರಮಾಣಪತ್ರ ನೀಡಿದ್ದು ನಿಪಿ -11 ಕ್ಕೆ ನಿಪಿ 11(ಎ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 83 ಪ್ರಾ.ಸಾ. 11 ಸತೀಶ್ ಎನ್ ಕೆ, ತಜ್ಞ ವೈಧ್ಯರು ತಮ್ಮ ಸಾಕ್ಷ್ಯದಲ್ಲಿ- ದಿಃ09-06-2019 ರಂದು ಸಂಜೆ 7-45 ಗಂಟೆ ಸಮಯದಲ್ಲಿ ಚಾಸಾ-2 ಸತೀಶ ಬಿನ್ ಗಣಪತಿ , 28 ವರ್ಷ ಸಾರೇಕೊಪ್ಪ ಗ್ರಾಮ ಇವರನ್ನು ಹೊಡೆದಾಟದ ಗಾಯದ ಹಿನ್ನೆಲೆಯಲ್ಲಿ ಕಲ್ಲು ಮತ್ತು ದೊಣ್ಣೆಯಿಂದ ಹಲ್ಲೆಯಾಗಿ ಗಾಯಗೊಂಡ ಮೇರೆಗೆ ಅವರನ್ನು ಚಿಕಿತ್ಸೆಗಾಗಿ ಪ್ರಾ ಸಾ -1 ರವರು ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 84 ಪ್ರಾ.ಸಾ. 11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ-ಚಾಸಾ-2 ರವರನ್ನು ಪರೀಕ್ಷೆ ಮಾಡಿದಾಗ ಚಾಸಾ-2 ಪ್ರಜ್ಞಾಹೀನ ಸ್ಥಿತಿಯಲ್ಲಿ ಇದ್ದು ಅವರನ್ನು ಪರೀಕ್ಷೆ ಮಾಡಿದಾಗ, ರೋಗಿಯು ಪ್ರಜ್ಞಾಹೀನ ಸ್ಥಿತಿಯಲ್ಲಿ ಇದ್ದು ಇವರಿಗೆ ತಲೆಗೆ ತೀವ್ರವಾಗಿ ಪೆಟ್ಟಾಗಿತ್ತು ಹಾಗೂ ಮೂಗಿನಿಂದ ರಕ್ತಸ್ರಾವವಾಗಿತ್ತು, ತಲೆಯ ಎಡಭಾಗ ಮತ್ತು ಮೇಲ್ಭಾಗವು ಊದಿಕೊಂಡಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 85 ಪ್ರಾ.ಸಾ. 11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ-ಇವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೇಲ್ಮಟ್ಟದ ಆಸ್ಪತ್ರೆಗೆ ಕಳುಹಿಸಿದ್ದು ಸದರಿ ಆಸ್ಪತ್ರೆಯ ವರದಿಯ ಪ್ರಕಾರ ಅವರ ತಲೆಯ ಮೂಳೆಯು ಮುರಿದು ಮೆದುಳಿನಲ್ಲಿ ರಕ್ತಸ್ರಾವವಾಗಿತ್ತು ಎಂದು ತಿಳಿಸಿರುತ್ತಾರೆ,

ಮೇಲ್ಕಂಡ ಗಾಯವು ಗಂಭೀರ ಸ್ವರೂಪದ ಗಾಯವಾಗಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 86 ಫ್ರಾ.ಸಾ. 11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ- ನಿಪಿ -12 ರಂತೆ ಗಾಯದ ಪ್ರಮಾಣಪತ್ರ ನೀಡಿರುತ್ತೇನೆ ಎಂದು , ನಿಪಿ 12 ಕ್ಕೆ ನಿಪಿ -12(ಎ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 87 ಫ್ರಾ.ಸಾ. 11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ-ಈ ಪ್ರಕರಣಕ್ಕೆ ಕುರಿತಂತೆ ಸೊರಬ ಪೋಲೀಸರು ನನ್ನ ಮುಂದೆ 2 ಹಿಡಿ ಗಾತ್ರದ ಕಲ್ಲು , ಒಂದು ಕಾಡು ಜಾತಿಯ ಕಲ್ಲು, 2.5 x 3 ಇಂಚು ಅಗಲದ ಮರದ ರೀಪೀಸ್ ಗಳನ್ನು ಹಾಜರುಪಡಿಸಿ ಈ ಆಯುಧಗಳಿಂದ ಸದರಿ ಗಾಯಗಳು ಆಗುವುದಾ ಎಂದು ಅಭಿಪ್ರಾಯ ಕೇಳಿದ್ದು ಅವುಗಳನ್ನು ನಾನು ಪರೀಕ್ಷಿಸಿ ಆಗುವ ಸಾಧ್ಯತೆ ಇದೆ ಎಂದು ನಾನು ನಿಪಿ 13 ರಂತೆ ಅಭಿಪ್ರಾಯ ಕೊಟ್ಟಿರುತ್ತೇನೆ ಎಂದು, ನಿಪಿ 13 ಕ್ಕೆ ನಿಪಿ13(ಎ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 88 ಫ್ರಾ.ಸಾ. 11 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ- ಕಲ್ಲುಗಳನ್ನು ಮು ಮಾ -1 ಮತ್ತು ಮು ಮಾ -2 ಎಂದು, ಮರದ ರೀಪೀಸ್ ನ್ನು ಮು ಮಾ -3 ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 89 ಪ್ರಾ.ಸಾ. 12 ನೀಲೇಂದ್ರ ನಾಯ್ಕು , ಮುಖ್ಯ ಪೇದೆ ರವರು ತಮ್ಮ ಸಾಕ್ಷ್ಯದಲ್ಲಿ– ದಿನಾಂಕಃ10–06–2019 ರಂದು ಹೆಚ್ ಸಿ 687 ಶಿವಮೊಗ್ಗ ಮ್ಯಾಕ್ಸ್ ಆಸ್ಪತ್ರೆಯಿಂದ ಗಾಯಾಳುವಿನ ಹೇಳಿಕೆ ಪಡೆದು ತಂದು ಹಾಜರುಪಡಿಸಿದ್ದನ್ನು ಅದನ್ನು ಠಾಣಾ ಗುನ್ನೆ ನಂಃ 82/2019 ರ ರೀತ್ಯ ಪ್ರಕರಣವನ್ನು ದಾಖಲು ಮಾಡಿ ಪ್ರ ವ ವರದಿಯನ್ನು ಮೇಲಾಧಿಕಾರಿಗಳಿಗೆ ಮತ್ತು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 90 ಪ್ರಾ.ಸಾ. 12 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಹೆಚ್ ಸಿ 687 ರವರಿಂದ ಸ್ವೀಕರಿಸಿದ ದೂರನ್ನು ನಿಪಿ 1 ಎಂದು , ನಿಪಿ 1 ಕ್ಕೆ ನಿಪಿ –1(ಬಿ) ರಂತೆ ಸಹಿ ಮಾಡಿರುತ್ತೇನೆ ಎಂದು , ಎಫ್ ಐ ಆರ್ ನ್ನು ನಿಪಿ –14 ಎಂದು ನಿಪಿ 14 ಕ್ಕೆ ನಿಪಿ –14(ಎ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 91 ಪ್ರಾ.ಸಾ. 12 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ನಂತರ ದಿನಾಂಕಃ 30–6–2019 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪಂಚನಾಮೆಯನ್ನು ಪ್ರಾ ಸಾ –2 ಮತ್ತು ಪ್ರಾ ಸಾ –3 ರವರ ಸಮಕ್ಷಮ ಪ್ರಾ ಸಾ –1 ರವರು ತೋರಿಸಿದ ಸ್ಥಳದಲ್ಲಿ ನಿಪಿ 2 ರಂತೆ ಸ್ಥಳ ಪಂಚನಾಮೆಯನ್ನು ಮಾಡಿದ್ದು , ನಿಪಿ –2(ಡಿ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 92 ಪ್ರಾ.ಸಾ. 12 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಆ ಸಮಯದಲ್ಲಿ ಪ್ರಾ ಸಾ –1 ರವರು ಮು ಮಾ 1 ರಿಂದ ಮು ಮಾ –3 , 2 ಕಲ್ಲು ಮತ್ತು 1 ದೊಣ್ಣೆಯನ್ನು ನನ್ನ ಮುಂದೆ ಹಾಜರುಪಡಿಸಿದ್ದು ಸದರಿ ಕಲ್ಲು ಮತ್ತು ದೊಣ್ಣೆಯನ್ನು ಆರೋಪಿತರು ತಮಗೆ ಹಲ್ಲೆ ಮಾಡಿರುವುದಾಗಿ ತಿಳಿಸಿ ಹಾಜರುಪಡಿಸಿರುತ್ತಾರೆ, ಅವುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 93 ಪ್ರಾ.ಸಾ. 12 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ನಂತರ ಸ್ಥಳದಲ್ಲಿ ನಿಪಿ 15 ರಂತೆ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ, ನಿಪಿ 15 ಕ್ಕೆ ನಿಪಿ –15(ಎ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 94 ಪ್ರಾ.ಸಾ. 12 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ನಂತರ ಸ್ಥಳದಲ್ಲಿ ನಿಪಿ 3 ಮತ್ತು ನಿಪಿ 4 ರಂತೆ ಫೋಟೋ ತೆಗೆಸಿರುತ್ತೇನೆ, ಮು ಮಾ –1 ರಿಂದ ಮು ಮಾ –3 ನ್ನು ಪಿ ಎಫ್ ಗೆ ಅಳವಡಿಸಿಕೊಂಡಿರುತ್ತೇನೆ, ಪ್ರಾ ಸಾ –2, ಪ್ರಾ ಸಾ –4 ಮತ್ತು ಚಾ ಸಾ 11 ರವರ ಹೇಳಿಕೆಯನ್ನು ಪಡೆದಿದರುತ್ತೇನೆ, ಪ್ರಾ ಸಾ –2 ರವರು ನಿಪಿ –7 ಮತ್ತು ನಿಪಿ –7(ಎ) ರಂತೆ, ಪ್ರಾ ಸಾ –4 ರವರು ನಿಪಿ –8, 8(ಎ) ರಿಂದ 8(ಡಿ) ವರೆಗೆ ನನ್ನ ಮುಂದೆ ಹೇಳಿಕೆ ಕೊಟ್ಟಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 95 ಪ್ರಾ.ಸಾ. 12 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ಸ್ಥಳ ಮಹಜರ್ ಸಮಯದಲ್ಲಿ ತೆಗೆದ ಫೋಟೋಗಳನ್ನು ಸಿ ಡಿ ಗೆ ಅಳವಡಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ರಂತೆ ನಿಪಿ 16 ರಂತೆ ದೃಢೀಕರಣ ನೀಡಿರುತ್ತೇನೆ, ನಿಪಿ 16 ಕ್ಕೆ ನಿಪಿ16(ಎ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 96 ಪ್ರಾ.ಸಾ. 12 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ನಂತರ ಸದರಿ ಪ್ರಕರಣದ ಸಂಪೂರ್ಣ ಕಡತವನ್ನು ಮುಂದಿನ ತನಿಖೆಗಾಗಿ ಪಿ ಎಸ್ ಐ ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ97 ಪ್ರಾ.ಸಾ. 13 ಶಂಕರಗೌಡ ಪಾಟೀಲ್, ಪಿ ಎಸ್ ಐ ರವರು ತಮ್ಮ ಸಾಕ್ಷ್ಯದಲ್ಲಿ– ದಿನಾಂಕಃ24–06–2019 ರಂದು ಎ ಎಸ್ ಐ ರವರಿಂದ ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಪಡೆದಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಛಿಸುವಿರಾ?

ಉಃ

ಪ್ರಃ 98 ಪ್ರಾ.ಸಾ. 13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ದಿಃ28–06–2019 ರಂದು ಪ್ರಾ ಸಾ –1 ರವರ ಮರು ಹೇಳಿಕೆಯನ್ನು ಪಡೆದಿರುತ್ತೇನೆ, ನಂತರ ಸೆಕ್ಷನ್ 307 ಐ ಪಿ ಸಿ ಯನ್ನು ದಾಖಲು ಮಾಡಿಕೊಳ್ಳಲು ನ್ಯಾಯಾಲಯದ ಅನುಮತಿಯನ್ನು ನಿಪಿ 17 ರಂತೆ

ಕೋರಿರುತ್ತೇನೆ, ನಿಪಿ 17 ಕ್ಕೆ ನಿಪಿ 17(ಎ) ರಂತೆ ಸಹಿ ಮಾಡಿರುತ್ತೇನೆ , ನಂತರ ನ್ಯಾಯಾಲಯದಿಂದ ಅನುಮತಿ ಪಡೆದುಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 99 ಫ್ರಾ.ಸಾ. 13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ದಿನಾಕಂಃ 20–07–2019 ರಂದು ಈ ಪ್ರಕರಣದ 9 ನೇ ಆರೋಪಿಯಾದ ಮಳ್ಳಿ ಲಕ್ಷ್ಮಣ ಈತನನ್ನು ಶಿಕಾರಿಪುರದ ಬಸ್ ನಿಲ್ದಾಣದ ಹತ್ತಿರ ವಶಕ್ಕೆ ಪಡೆದು ಆತನನ್ನು ಠಾಣೆಗೆ ಕರೆದುಕೊಂಡು ಬಂದು ದಸ್ತಗಿರಿ ಕ್ರಮ ಅನುಸರಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ, 9 ನೇ ಆರೋಪಿಯನ್ನು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ100 ಫ್ರಾ.ಸಾ. 13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ದಿನಾಂಃ 21–07–2019 ರಂದು ಪ್ರಕರಣದ ಉಳಿದ ಆರೋಪಿತರಾದ 2 ರಿಂದ 8 ರವರಿಗೆ ನಿರೀಕ್ಷಣಾ ಜಾಮೀನು ಪಡೆದು ಠಾಣೆಗೆ ಹಾಜರಾಗಿದ್ದು ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 101 ಫ್ರಾ.ಸಾ. 13 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ದಿನಾಂಕಃ 21–08–2019 ರಂದು ನನಗೆ ವರ್ಗಾವಣೆ ಆಗಿದ್ದರಿಂದ ಎ ಎಸ್ ಐ ಚೆನ್ನಪ್ಪ ರವರಿಗೆ ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಹಸ್ತಾಂತರಿಸಿರುತ್ತೇನೆ ಎಂದು , 2 ರಿಂದ 8 ನೇ

ಆರೋಪಿತರನ್ನು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 102 ಪ್ರಾ.ಸಾ. 14 ಬಿ ಜಿ ಸತೀಶ ರವರಿಗೆ ಮಾತನಾಡಲು ಸಾಧ್ಯವಾಗದ ಕಾರಣ ಸರ್ಕಾರಿ ಅಭಿಯೋಜಕರು ಅವರಿಗೆ ಮುಖ್ಯ ವಿಚಾರಣೆಯ ಪ್ರಶ್ನೆಗಳನ್ನು ನೀಡಿದ್ದು, ಅವರು ಈ ಕೆಳಕಂಡಂತೆ ಉತ್ತರಿಸಿರುತ್ತಾರೆ.

1) ನಿಮಗೆ ಮಾತನಾಡಲು ಆಗುತ್ತದೆಯೇ?

ಉತ್ತರಃ ಇಲ್ಲ

2) ನಿಮಗೆ ಓದಲು ಮತ್ತು ಬರೆಯಲು ಆಗುತ್ತದೆಯೇ?
ಉತ್ತರಃ ಸ್ವಲ್ಪ , ಬರುವುದಿಲ್ಲ

3) ನಿಮಗೆ ಮಳ್ಳಿ ರಾಜಪ್ಪ , ಮಳ್ಳಿ ಪರಸಪ್ಪ, ಮಳ್ಳಿ ರಮೇಶ, ಮಳ್ಳಿ ಲಿಂಗರಾಜ , ಮಳ್ಳಿ ಅಣ್ಣಪ್ಪ , ಮಳ್ಳಿ ಲೋಕೇಶ , ಮಳ್ಳಿ ಟಾಕಪ್ಪ , ಮಳ್ಳಿ ಕೃಷ್ಣಪ್ಪ ಮತ್ತು ಲಕ್ಷ್ಮಣಪ್ಪ ಇವರ ಪರಿಚಯವಿದೆಯೇ?
ಉತ್ತರಃ ಹೌದು ಹೋಯಿತು

4) ನಿಮ್ಮ ಮ ತ್ತು ಆರೋಪಿತರ ನಡುವೆ ಏನಾಗಿತ್ತು?
ಉತ್ತರಃ ತೋಟದ , ಬೆಂಕಿ ಹೋಯಿತು

5) ಯಾವ ದಿನಾಂಕದಂದು, ಎಷ್ಟು ಗಂಟೆಗೆ , ಯಾವ ಸ್ಥಳದಲ್ಲಿ?
ಉತ್ತರಃ 09-06-2019 , 7.30 ಪಿ ಎಂ , ಹುಣಸೆಕೊಪ್ಪ ಮಂಜುನಾಥ ರಸ್ತೆ ಮುಂದೆ

6) ಯಾವ ವಿಚಾರಕ್ಕೆ ಸಂಬಂಧಪಟ್ಟಂತೆ ಗಲಾಟೆ ಆಯಿತು?
ಉತ್ತರಃ ಕಲ್ಲ
7)ಏನು ಗಲಾಟೆ ನಡೆಯಿತು?
ಉತ್ತರಃ ಲೋಕೇಶ , ಅಣ್ಣಪ್ಪ , ನಿಂಗರಾಜ , ಮಳ್ಳಿರಮೇಶ ,
ಕಾಲ

8) ನಿಮಗೆ ಯಾರು, ಯಾವುದರಿಂದ, ಏನು ಮಾಡಿದರು?
ಉತ್ತರಃ ಮಳ್ಳಿರಮೇಶ , ಕಲ್ಲಿ ಹೋಯಿತು

9) ಅದರಿಂದ ನಿಮಗೆ ಏನಾಯಿತು?
ಉತ್ತರಃ ಗಾಯ , ಪ್ರಜ್ಞೆ ಹೊಯಿತು

10) ನಿಮಗೆ ಹಲ್ಲೆ ಮಾಡಲು ಬಳಸಿದ ಆಯುಧವನ್ನು ಗುರುತಿಸುತ್ತೀರಾ?
ಉತ್ತರಃ ಕಲ್ಲು ( ಎಂ ಒ 2)

(ಸಾಕ್ಷಿಗೆ ಹಲ್ಲೆಗೆ ಬಳಸಿದ ಕಲ್ಲನ್ನು ತೋರಿಸಿ ಗುರುತಿಸಿಕೊಳ್ಳುವುದು.)

11) ನಿಶಾನೆ ಪಿ 5 ಮತ್ತು ನಿಪಿ 6 ಫೋಟೋಗಳಲ್ಲಿರುವ ಹಾಸಿಗೆಯಲ್ಲಿ ಮಲಗಿರುವ ವ್ಯಕ್ತಿ ಯಾರು?
ಉತ್ತರಃ ಬಿ ಜಿ ಸತೀಶ ,ನಾನು

12) ನಿಮಗೆ ನಿಮ್ಮ ಮನೆಯವರು ಯಾವ ಯಾವ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಿರುತ್ತಾರೆ ಎಂಬುದನ್ನು ತಿಳಿದುಕೊಂಡಿರುವಿರೋ? ತಿಳಿದುಕೊಂಡಿದ್ದರೆ ಆಸ್ಪತ್ರೆಗಳ ಹೆಸರುಗಳನ್ನು ಬರೆಯಬಹುದೇ?
ಉತ್ತರಃ ಶಿವಮೊಗ್ಗ ಮ್ಯಾಕ್ಸ್ , ಉಡುಪಿ ಆದರ್ಶ

ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ103 ಪ್ರಾ.ಸಾ. 15 ಪ್ರಶಾಂತ್ ಕುಮಾರ್ ಟಿ ಬಿ , ಪಿ ಎಸ್ ಐ ರವರು ತಮ್ಮ ಸಾಕ್ಷ್ಯದಲ್ಲಿ -ದಿನಾಂಕಃ 04-04-2020 ರಂದು ಚಾಸಾ17 ರವರಿಂದ ಪ್ರಕರಣದ ಕಡತವನ್ನು ಪಡೆದುಕೊಂಡು, ಕಡತವನ್ನು ಪರಿಶೀಲಿಸಿ ತನಿಖೆಯನ್ನು ಮುಂದುವರೆಸಿರುತ್ತೇನೆ. ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 104 ಪ್ರಾ.ಸಾ. 15 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ- ದಿನಾಂಕಃ 04-04-2020 ರಂದು ಚಾಸಾ1 ರವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ, ಅದೇ ದಿವಸ ಚಾಸಾ6 ರಿಂದ ಚಾಸಾ10 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ, ದಿನಾಂಕಃ 20-08-2020 ರಂದು ಚಾಸಾ14 ರವರು ಚಾಸಾ2 ರವರಿಗೆ ಚಿಕಿತ್ಸೆ ನೀಡಿದ ಬಗ್ಗೆ ಮತ್ತು ಚಾಸಾ2 ರವರ ಪ್ರಸ್ತುತ ಸ್ಥಿತಿಯ ಬಗ್ಗೆ ನೀಡಿದ ನಿಪಿ 11 ಅಭಿಪ್ರಾಯ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ನಿಪಿ 11 ಕ್ಕೆ ನಿಪಿ11(ಬಿ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ105 ಫ್ರಾ.ಸಾ. 15 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ–ನಾನು ಚಾಸಾ 12 ಡಾಃ ಸತೀಶ ರವರಿಂದ ಕಲ್ಲು ಮತ್ತು ಮರದ ರಿಪೀಸ್ ನಿಂದ ಹೊಡೆದರೆ ಗಾಯದ ಪ್ರಮಾಣಪತ್ರದಲ್ಲಿ ಹೇಳಿರುವ ಗಾಯಗಳು ಆಗುವ ಸಂಭವ ಇರುತ್ತದೆ ಎಂದು ನೀಡಿದ ಅಭಿಪ್ರಾಯ ವರದಿಯನ್ನು ನಿಪಿ 13 ರಂತೆ ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ನಿಪಿ 13 ಕ್ಕೆ ನಿಪಿ 13(ಬಿ) ರಂತೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 106 ಫ್ರಾ.ಸಾ. 15 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ– ನಂತರ ತನಿಖೆ ಪೂರ್ಣಗೊಂಡಿದ್ದರಿಂದ ದಿನಾಂಕಃ 03–10–2020 ರಂದು ಮಾನ್ಯ ನ್ಯಾಯಾಲಯದ ಮುಂದೆ ಆರೋಪಿತರ ವಿರುದ್ದ ದೋಷಾರೋಪಣಾ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉಃ

ಪ್ರಃ 107 ನಿಮ್ಮ ಪರ ಸಾಕ್ಷಿಗಳು ಇದ್ದಾರೆಯೇ ?

ಉತ್ತರ :

ಪ್ರಶ್ನೆ: 108 ನೀವೇನಾದರೂ ಹೇಳಲು ಇಚ್ಚಿಸುವಿರಾ?

ಉತ್ತರ

ಆರೋಪಿತರಿಗೆ ಮೇಲ್ಕಂಡ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರು ನುಡಿದಂತೆ ಉತ್ತರವನ್ನು ನನ್ನ ಹಸ್ತಾಕ್ಷರದಲ್ಲಿ ಪಡೆದಿರುತ್ತೇನೆ.

ದಿನಾಂಕಃ 5 ನೇ ಡಿಸೆಂಬರ್, 2025 ನೇ ಇಸವಿ.

**(ರವೀಂದ್ರ ಆರ್.)**
**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಶಿವಮೊಗ್ಗ (ಪಿಠಾಸೀನ ಸಾಗರ).**